**ಕರ್ನಾಟಕ ವಿಧಾನ ಸಭೆ**

**ಮಂಗಳವಾರ 2ನೇ ಮಾರ್ಚ್, 2010ರಂದು**

**ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ**

**ಬೆಳಿಗ್ಗೆ 10 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು.**

**ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು**

**ಪೀಠವನ್ನು ಅಲಂಕರಿಸಿದ್ದರು.**

**1. ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :**

**ವಿಷಯ** : ರಾಜ್ಯದಲ್ಲಿ ಹದಗೆಟ್ಟಿರುವ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ.

**ಶ್ರೀ ಬಂಡೆಪ್ಪ ಕಾಶೆಂಪೂರ್** : ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ವತಿಯಿಂದ ನಿಲುವಳಿ ಸೂಚನೆಯೊಂದನ್ನು ಕಳುಹಿಸಿಕೊಟ್ಟಿದ್ದೇವೆ. ದಯವಿಟ್ಟು ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

**ಅಧ್ಯಕ್ಷರು** : ಮೊದಲನೆಯದಾಗಿ, ತಮ್ಮ ನಿಲುವಳಿ ಸೂಚನೆ in-timeಗೆ ಬರಲಿಲ್ಲ. ಎರಡನೆಯದಾಗಿ, Law and Order situation ಬಗ್ಗೆ ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ. ಈ ಬಗ್ಗೆ ಈಗಾಗಲೇ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು statement ಮಾಡಿದ್ದಾರೆ. ಈಗಲೂ ಮತ್ತೆ statement ಮಾಡುವವರಿದ್ದಾರೆ. ಈಗ suo-moto statement ಮಾಡುತ್ತಾರೆ. ಆಗ ನೀವು ಈ ಬಗ್ಗೆ ಪ್ರಸ್ತಾಪ ಮಾಡಬಹುದು.

**ಶ್ರೀ ಸಿದ್ದರಾಮಯ್ಯ** (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿನ್ನೆ ಮಧ್ಯಾಹ್ನ ನಾನು ಪ್ರಸ್ತಾಪ ಮಾಡಿದ್ದೆ, ಹಾಸನದಲ್ಲಿ, ಶಿವಮೊಗ್ಗದಲ್ಲಿ ಗಲಭೆಗಳಾದ ಮೇಲೆ ಅಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ಆಗಿದೆ. ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಂತಹ article ಆಧಾರದ ಮೇಲೆ, ಒಂದು ಗುಂಪಿನವರು ಅದನ್ನು ವಿರೋಧ ಮಾಡಿ ಪ್ರತಿಭಟನೆ ಮಾಡುತ್ತಿದ್ದಾರೆ. ಇನ್ನೊಂದು ಗುಂಪಿನವರು ಅದಕ್ಕೆ ಪ್ರತಿಯಾಗಿ ಪ್ರತಿರೋಧ ಮಾಡತಕ್ಕದ್ದನ್ನೂ ಸಹ ಮಾಡುತ್ತಿದ್ದಾರೆ. ಹಾಸನದಲ್ಲಿ ಮತ್ತು ಶಿವಮೊಗ್ಗದಲ್ಲಿ ಆದ ಗಲಭೆ ಬಗ್ಗೆ ನಿನ್ನೆ ನಾನು ಪ್ರಸ್ತಾಪ ಮಾಡಿದಾಗ, ಪರಿಸ್ಥಿತಿ ಈಗ ಏನಾಗಿದೆ ? ಇಡೀ ರಾಜ್ಯದಲ್ಲಿ ಯಾವ ತರಹದ ಪರಿಸ್ಥಿತಿ ಇದೆ ? ಅಲ್ಲಿ ಬಿಗುವಿನ ವಾತಾವರಣ ಹೇಗೆ ನಿರ್ಮಾಣವಾಗಿದೆ ಎಂಬುದನ್ನೆಲ್ಲಾ ಪ್ರಸ್ತಾಪ

ಮಾಡಿದ್ದೆ. ನಿನ್ನೆ ಈ ಬಗ್ಗೆ ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ರೀತಿಯ ಘಟನೆ ಆಗಿರತಕ್ಕದ್ದು ನಿಜ, ಆದರೆ ಯಾವುದೇ ಅಹಿತಕರವಾದಂತಹ ಘಟನೆಗಳು ನಡೆದಿಲ್ಲ. ಸಣ್ಣಪುಟ್ಟ ಘಟನೆಗಳಾಗಿವೆ, ಕಾನೂನು ನಮ್ಮ ಹಿಡಿತದಲ್ಲಿದೆ, ಸುವ್ಯವಸ್ಥೆ ಇದೆ, situation is well under control, there is nothing to worry ಎಂದೆಲ್ಲಾ ಅವರು ಉತ್ತರ ಕೊಟ್ಟರು. ಮತ್ತೆ ಅದನ್ನು ಯಾರೂ ಸಹ ದುರುಪಯೋಗ ಮಾಡಿಕೊಳ್ಳದ ರೀತಿಯಲ್ಲಿ ನೋಡಿಕೊಳ್ಳಿ ಎಂಬ ಸಲಹೆಯನ್ನೂ ಸಹ ನಾವು ಕೊಟ್ಟೆವು, ಸಮಾಜಘಾತುಕ ಶಕ್ತಿಗಳು ಇದರಲ್ಲಿ ನುಸುಳಿಕೊಳ್ಳತಕ್ಕಂಥ ಸಾಧ್ಯತೆಗಳು ಇರುತ್ತವೆ. ಕಾನೂನನ್ನು ಕೈಗೆ ತೆಗೆದುಕೊಳ್ಳತಕ್ಕಂಥ ಸಾಧ್ಯತೆಗಳು ಇರುತ್ತವೆ, ಇದರಿಂದ ಕೆಟ್ಟ ಪರಿಣಾಮ ಆಗಬಹುದು ಎಂದು ನಾನು ಪ್ರಸ್ತಾಪ ಮಾಡಿದಾಗ, ಮಾನ್ಯ ಮುಖ್ಯಮಂತ್ರಿಗಳು, ಇಲ್ಲ, ಎಲ್ಲಾ ಬಿಗಿಯಾದಂತಹ ಕ್ರಮಗಳನ್ನು ತೆಗೆದುಕೊಂಡಿದ್ದೇವೆ, ಏನೂ ಆಗಲಿಕ್ಕೆ ಸಾಧ್ಯವಿಲ್ಲ ಎನ್ನುವ ಉತ್ತರ ಕೊಟ್ಟರು. ಅದಾದ ಮೇಲೆ within half an hour ನಮಗೆ ಮತ್ತೆ ಮಾಹಿತಿ ಬಂತು. ಟಿವಿಯಲ್ಲೆಲ್ಲಾ ಬರುತ್ತಿತ್ತು. ಟಿವಿ-9ನಲ್ಲಿ ಬಂತು, ಬೇರೆ ಬೇರೆ ಚಾನೆಲ್‌ಗಳಲ್ಲೂ ಸಹ ಬಂತು. ಒಬ್ಬರು ಸತ್ತಿದ್ದಾರೆಂದು ಮೊದಲು ಸುದ್ದಿ ಬಂತು. Firing ಆಗಿದೆ ಎಂಬ ಸುದ್ದಿ ಬಂತು. ಆಮೇಲೆ ಇನ್ನೊಬ್ಬರು ಸತ್ತಿದ್ದಾರೆ, ಒಟ್ಟು ಇಬ್ಬರು ಸತ್ತಿದ್ದಾರೆ ಎಂದು ನಮಗೆ ಮಾಹಿತಿ ಬಂತು. ತಕ್ಷಣವೇ ನಾನು ಈ ಬಗ್ಗೆ ಇಲ್ಲಿ ಪ್ರಸ್ತಾಪಿಸಿದೆ. ಆಗ ಮಾನ್ಯ ಮುಖ್ಯಮಂತ್ರಿಗಳು ಅವರ ಸ್ಥಳದಲ್ಲಿ ಇರಲಿಲ್ಲ. ಅವರು ಹೊರಗಡೆ ಎಲ್ಲೋ ಹೋಗಿದ್ದರು. ಆಗ ಮಾನ್ಯ Parliamentary Affairs Minister, ಈ ಬಗ್ಗೆ ನಾವು ನಾಳೆ ವಿವರವಾದಂತಹ ಹೇಳಿಕೆಯನ್ನು ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದರು. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಮಾಡಿದಂತಹ ಸಂದರ್ಭದಲ್ಲಿ, ನಮಗೆ ಅಲ್ಲಿ tension ಇತ್ತು ಎಂಬ ಬಗ್ಗೆ ಅನುಮಾನ ಇತ್ತು. ಅದು ಅಷ್ಟೊತ್ತಿಗಾಗಲೇ ಸರ್ಕಾರಕ್ಕೂ ಗೊತ್ತಾಗಿರಬೇಕು. Tension ಇರತಕ್ಕದ್ದು, ಅದರ ತೀವ್ರತೆ, ಅದರಿಂದ ಆಗತಕ್ಕ ಪರಿಣಾಮಗಳೇನು ? ಎಂಬುದು ಸರ್ಕಾರಕ್ಕೆ ಗೊತ್ತಿರಬೇಕು. ಅಲ್ಲಿಯ ಜಿಲ್ಲಾಧಿಕಾರಿ, ಎಸ್ಪಿ ಅಥವಾ ಬೇರೆ ಪೊಲೀಸ್ ಅಧಿಕಾರಿಗಳು ಅಲ್ಲಿಗೆ ಯಾರು ಹೋಗಿದ್ದರು, ಅಲ್ಲಿ ಇರತಕ್ಕ ಹಿರಿಯ ಅಧಿಕಾರಿಗಳು ಇವರಿಗೆ ಆ ಬಗ್ಗೆ ಮಾಹಿತಿ

ಕೊಟ್ಟಿರಬೇಕಾಗಿತ್ತು. ಆಮೇಲೆ ನಮಗೆ ಗೊತ್ತಾಯಿತು. ಅಲ್ಲಿ tension ಜಾಸ್ತಿಯಾಗಿ, ಗಲಾಟೆಗಳು ಜಾತಿಯಾಗಿ, vehicleಗಳನ್ನು ಸುಟ್ಟು ಹಾಕಲಾಗಿದೆ, ಅಂಗಡಿಗಳಿಗೆ ಬೆಂಕಿ ಹಾಕಲಾಗಿದೆ, ಲಾಠಿಚಾರ್ಜ್ ಆಗಿದೆ, ಅಶ್ರುವಾಯು ಪ್ರಯೋಗಿಸಲಾಗಿದೆ, ಬೇರೆ ಬೇರೆ ಘಟನೆಗಳಾಗಿದೆ. ಪತ್ರಿಕೆಗಳಲ್ಲೆಲ್ಲಾ ಆ ಬಗ್ಗೆ ವರದಿಯಾಗಿದೆ. ಈ ಬಗ್ಗೆ ಸಂಬಂಧಪಟ್ಟಂತಹ ಜನರಿಗೂ ಕೂಡ ನಾನು ಫೋನ್ ಮಾಡಿದ್ದೆ. ಅಧಿಕಾರಿಗಳಾದ DC & SPಗೂ ಕೂಡ ನಾನು ಫೋನ್ ಮಾಡಿದ್ದೆ. Firing ಮಾಡಬೇಕಾದಂತಹ ಅನಿವಾರ್ಯತೆ ನಿರ್ಮಾಣವಾಯಿತು ಎಂದು SPಯವರು ಹೇಳಿದರು. ಶಿವಮೊಗ್ಗ DCಯವರು firing ಮಾಡಲಿಕ್ಕೆ order ಕೊಟ್ಟರು ಎಂಬ informationಗಳನ್ನೆಲ್ಲಾ ನಮಗೆ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿ ಆಜ್ಞೆ ಕೊಡತಕ್ಕ ಪರಿಸ್ಥಿತಿ ನಿರ್ಮಾಣವಾಗಿರುವಾಗ, ಮಾನ್ಯ ಮುಖ್ಯಮಂತ್ರಿಗಳಿಗೆ ಏಕೆ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಅವರು ಕೊಡಲಿಲ್ಲ ? ಕೊಟ್ಟಿದ್ದರೆ, ಇನ್ನೂ ಬಿಗಿಯಾದ ಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತಿತ್ತು. ಬಹುಶಃ ಅಲ್ಲಿ ಪೊಲೀಸ್‌ನವರು ಸಾಕಷ್ಟು force ಅನ್ನು ಇಟ್ಟುಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದರೋ ಇಲ್ಲವೋ ಗೊತ್ತಿಲ್ಲ. ಹೊರಗಡೆಯಿಂದಲಾದರೂ ಪೊಲೀಸ್‌ನವರನ್ನು ಕರೆಸಿಕೊಳ್ಳಬೇಕಾಗಿತ್ತು. ಇಂತಹ ಲೇಖನ ಪತ್ರಿಕೆಯಲ್ಲಿ ಬಂದಾಗಲೇ, ಇಂಥದ್ದೆಲ್ಲಾ ನಡೆಯುತ್ತದೆಂದು ಊಹಿಸಿಕೊಳ್ಳಬೇಕಾಗಿತ್ತು. intelligence ಇದರ ಬಗ್ಗೆ ಕೆಲಸ ಮಾಡಬೇಕಾಗಿತ್ತು. intelligence ನವರೂ ಸಹ ಕೆಲಸ ಮಾಡಿಲ್ಲ. ಯಾರೇ ತಪ್ಪು ಮಾಡಿದ್ದರೂ, ಅದು ತಪ್ಪೇ, ಆ ತಪ್ಪನ್ನು ಈ ಗುಂಪಿನವರು ಮಾಡಿರಲಿ, ಆ ಗುಂಪಿನವರು ಮಾಡಿರಲಿ, ಆ ಜನರು ಮಾಡಿರಲಿ, ಈ ಜನರು ಮಾಡಿರಲಿ, ಯಾರೇ ಮಾಡಿದ್ದರೂ ಅದು ತಪ್ಪು. ಇದರಿಂದ ಇಬ್ಬರು ಅಮಾಯಕ ಜನರು ಸತ್ತಿದ್ದಾರೆ. ಒಬ್ಬರು ಸಾದಿಕ್ ಎಂಬುವವರು, ಮತ್ತೊಬ್ಬರು ಲತೀಫ್ ಎಂಬುವವರು ಸತ್ತಿದ್ದಾರೆ. ಇಬ್ಬರೂ ಚಿಕ್ಕ ವಯಸ್ಸಿನವರಾಗಿದ್ದರು. ಪತ್ರಿಕೆಯಲ್ಲಿ ವರದಿಯಾಗಿರುವ ರೀತಿಯಲ್ಲಿ ಒಬ್ಬರಿಗೆ 23 ವರ್ಷ, ಇನ್ನೊಬ್ಬರಿಗೆ 25 ವರ್ಷವಾಗಿದೆ. ಇದಕ್ಕೆ ಯಾರೂ ಜವಾಬ್ದಾರರಾಗಲಿಕ್ಕೆ ಆಗುವುದಿಲ್ಲ. ಇದಕ್ಕೆ ಯಾರೂ ಬೆಲೆ ಕೊಡಲಿಕ್ಕಾಗುವುದಿಲ್ಲ. ನಾನೇನು ಹೇಳುತ್ತೇನೆ ಎಂದರೆ, ಹೀಗೆಯೇ ಅಪರಾಧ ಮಾಡಿದವರು ಯಾವಾಗಲೂ ತಪ್ಪಿಸಿಕೊಳ್ಳುತ್ತಿರುತ್ತಾರೆ, ಇಂಥದ್ದರಲ್ಲೆಲ್ಲಾ

ನಿರಪರಾಧಿಗಳು ಸಿಕ್ಕಿಹಾಕಿಕೊಳ್ಳುತ್ತಾರೆ. ನಿರಪರಾಧಿಗಳು ಜೀವ ತೆರುತ್ತಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿವರವಾದಂತಹ ಉತ್ತರವನ್ನು ಕೊಡಬೇಕು. ಸರ್ಕಾರದ ಗಮನಕ್ಕೆ ಇದನ್ನೆಲ್ಲಾ ತರದಿರತಕ್ಕ ಅಧಿಕಾರಿಗಳ ಕ್ರಮ ಸರಿಯಲ್ಲ. ಈ ತರಹದ ತೀವ್ರವಾದಂತಹ ಪರಿಸ್ಥಿತಿ ನಿರ್ಮಾಣವಾದರೂ ಕೂಡ, ಗಂಭಿರವಾದಂತಹ ಪರಿಸ್ಥಿತಿ ನಿರ್ಮಾಣವಾದರೂ ಸಹ, ಮಾನ್ಯ ಮುಖ್ಯಮಂತ್ರಿಗಳಿಗೇ ಅವರು ಸರಿಯಾದಂತಹ ಮಾಹಿತಿ ಕೊಡುವುದಿಲ್ಲ ಎನ್ನುವುದಾದರೆ, ಮಾನ್ಯ Home Minister ರವರಿಗೇ ಸರಿಯಾದ ಮಾಹಿತಿ ಸಿಕ್ಕಲಿಲ್ಲ ಎನ್ನುವುದಾದರೆ, ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಸರ್ಕಾರ ಏನು ಮಾಡುತ್ತಿದೆ ? ಈ ಪ್ರಶ್ನೆಗಳು ಸ್ವಾಭಾವಿಕವಾಗಿ ಉದ್ಭವವಾಗುತ್ತವೆ. ನಮಗೆ ಇದರಲ್ಲೇನೋ ರಾಜಕೀಯ ಲಾಭ ಪಡೆದುಕೊಳ್ಳಬೇಕೆಂಬ ಉದ್ದೇಶವಿಲ್ಲ. ಅಂಥಾದ್ದು ಯಾವತ್ತಿಗೂ ಕೂಡ ಆಗಬಾರದು. ಗೋಲಿಬಾರ್ ಆಗುವುದು, ಲಾಠಿಚಾರ್ಜ್ ಆಗುವುದು, ಅಶ್ರುವಾಯು ಪ್ರಯೋಗಿಸುವುದು, ಎರಡು ಗುಂಪುಗಳ ನಡುವೆ communal clashಗೆ ಅವಕಾಶ ಮಾಡಿಕೊಡುವುದು ಆಗಬಾರದು. It is very bad. ಇದನ್ನು ಹತ್ತಿಕ್ಕಬೇಕು. ಇದಕ್ಕೆ ಮುಂಜಾಗ್ರತಾ ಕ್ರಮಗಳನ್ನು ಸರಿಯಾಗಿ ತೆಗೆದುಕೊಳ್ಳಬೇಕು. ತೆಗೆದುಕೊಳ್ಳದಿರುವ ಕಾರಣದಿಂದಲೇ ಇವತ್ತು ಇದೆಲ್ಲಾ ಆಗುತ್ತಿದೆ. ಈ ತರಹದ್ದರ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನೇ ಸರಿಯಾಗಿ ಕೊಟ್ಟಿಲ್ಲ. ಯಾರು ಇದಕ್ಕೆ ಜವಾಬ್ದಾರರು ? ಸರ್ಕಾರ ಏಕೆ ಬಿಗಿಯಾದಂತಹ ಕ್ರಮ ತೆಗೆದುಕೊಳ್ಳಲಿಲ್ಲ ? ಅರ್ಧ ಗಂಟೆಯಲ್ಲಿ ಗೋಲಿಬಾರ್ ಆಗುವುದಿದ್ದರೆ, ಸರ್ಕಾರಕ್ಕೆ ಗೊತ್ತಿಲ್ಲದಂತೆ D.C. firingಗೆ order ಕೊಟ್ಟರೇ ? ಸರ್ಕಾರಕ್ಕೆ ಆ ಬಗ್ಗೆ ತಿಳಿಸಲಿಲ್ಲವೇ ? ಆಯಿತು, situation warrant ಮಾಡಿತು ಎಂದೇ ಇಟ್ಟುಕೊಳ್ಳೋಣ. ಅರ್ಧ ಗಂಟೆ ಹಿಂದೆ, ಇರತಕ್ಕಂಥ situation ಅನ್ನು ನಾವೆಲ್ಲಾ ನಿಭಾಯಿಸಿದ್ದೇವೆ ಎಂದು ಉತ್ತರ ಕೊಟ್ಟಿದ್ದರು. ಇನ್ನರ್ಧ ಗಂಟೆಯಲ್ಲಿ ಗೋಲಿಬಾರ್ ಮಾಡತಕ್ಕಂಥ ಪರಿಸ್ಥಿತಿ ಇದ್ದಕ್ಕಿದ್ದ ಹಾಗೆ ಹೇಗೆ ನಿರ್ಮಾಣವಾಯಿತು ? ಹೇಗೆ ಈ ರೀತಿ ಪರಿಸ್ಥಿತಿ ನಿರ್ಮಾಣ ಆಗಲಿಕ್ಕೆ ಸಾಧ್ಯವಾಗುತ್ತದೆ ? ಇದೆಲ್ಲದರ ಬಗ್ಗೆ ಸರ್ಕಾರ ಸರಿಯಾದಂತಹ ಉತ್ತರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಸರ್ಕಾರ ಉತ್ತರ ಕೊಟ್ಟಾದ

ಮೇಲೆ, ಈ ಬಗ್ಗೆ ನಾನು ನನ್ನ ಸಲಹೆಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಬಂಡೆಪ್ಪ ಕಾಶೆಂಪೂರ್**: ಅಧ್ಯಕ್ಷರೆ, ಇದಕ್ಕೆ ಸಂಬಂಧಿಸಿದಂತೆ ನಾನೊಂದು ನಿಲುವಳಿ ಸೂಚನೆಯನ್ನು ತಂದಿದ್ದೇನೆ, ತಾವು ಅನುಮತಿ ನೀಡಬೇಕು.

**ಅಧ್ಯಕ್ಷರು**: ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ, ಕಾನೂನು ಸುವ್ಯವಸ್ಥೆಯ ವಿಚಾರವನ್ನು ನಿಲುವಳಿ ಸೂಚನೆಯಲ್ಲಿ ತರುವುದಕ್ಕೆ ಅವಕಾಶವಿಲ್ಲ.

**ಶ್ರೀ ಬಂಡೆಪ್ಪ ಕಾಶೆಂಪೂರ್**: ರಾಜ್ಯದಲ್ಲಿ ಅಲ್ಪಸಂಖ್ಯಾತರ ಮೇಲೆ ಪದೇ ಪದೇ ಏನು ದಾಳಿಯಾಗುತ್ತಿದೆ.

**ಅಧ್ಯಕ್ಷರು**: ಆದರೆ ನಿಯಮ ಬಿಟ್ಟು ಮಾಡುವುದಕ್ಕಾಗುವುದಿಲ್ಲ. ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಅದನ್ನು ಮಾತನಾಡಬಹುದು, ನಿಲುವಳಿ ಸೂಚನೆಗೆ ಅವಕಾಶವಿಲ್ಲ, ನಾನು ತಿರಸ್ಕಾರ ಮಾಡಿದ್ದೇನೆ, ಬೇರೆ ರೀತಿಯಲ್ಲಿ ಪ್ರಸ್ತಾಪ ಮಾಡಿ.

**ಶ್ರೀ ಆರ್.ರೋಷನ್ ಬೇಗ್**: ಮಾನ್ಯ ಅಧ್ಯಕ್ಷರೆ, ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುತ್ತಿಲ್ಲ, ನಿನ್ನೆ ನಮ್ಮ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಸಾಹೇಬರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ನಾನು ಕೂಡ ಪ್ರಸ್ತಾಪ ಮಾಡಿದೆ, ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರು, ಅವರು ಹೇಳಿಕೆ ಕೊಟ್ಟ ಮೇಲೆ ನಾನು ವಾದ ವಿವಾದ ಮಾಡಬಾರದು, ರಾಜ್ಯದಲ್ಲಿ ಶಾಂತಿ ನಿರ್ಮಾಣವಾಗಬೇಕು, ನಾವು opposition ನಲ್ಲಿ ಕುಳಿತುಕೊಂಡು ಬರೀ ರಾಜಕೀಯ ಮಾಡುವುದು ಬೇಡವೆಂದು ನಾನು ಏನು ಮಾತನಾಡುವುದಕ್ಕೆ ಹೋಗಲಿಲ್ಲ. ನಾನು ಹೇಳುವುದಿಷ್ಟೆ, ನಿನ್ನೆ ಮುಖ್ಯಮಂತ್ರಿಗಳು statement ಮಾಡಿದ ಮೇಲೆ ಅಷ್ಟು ಹೊತ್ತಿಗೆ ಅವರಿಗೆ ಗೊತ್ತಿರಲಿಲ್ಲ, ಹಾಸನದಲ್ಲಿ ಅಲ್ಪಸಂಖ್ಯಾತರ ಅಂಗಡಿಗಳು ಲೂಟಿಯಾಯಿತು, ಅಲ್ಲಲ್ಲಿ attack ಗಳು ಶುರುವಾಯಿತು. ಅವರಿಗೆ ಸರಿಯಾಗಿ ಮಾಹಿತಿಗಳು feed back ಆಗಿಲ್ಲ. ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯರವರು ಹೇಳಿದಂತೆ, ನಾವು

ಅಸೆಂಬ್ಲಿಯಿಂದ ಆಚೆಗೆ ಹೋಗಿದ್ದೇವೆ, ಆಗಲೇ ಶಿವಮೊಗ್ಗದಲ್ಲಿ firing ಶುರುವಾಗಿದೆ.

**ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:** ಈ ಮಾತು ಪೂರ್ವಾಗ್ರಹ ಪೀಡಿತವಾದ ಮಾತು, ಈ ಮಾತನ್ನು ನಂಬುತ್ತೀರಾ, ಸರ್ಕಾರದ ಮೇಲೆ ಬೇಕೆಂದೇ ಗೂಬೆ ಕೂರಿಸಲು ಹೇಳುತ್ತಿರುವ ಮಾತಿದು... X X

**(ಗೊಂದಲ)**

**ಅಧ್ಯಕ್ಷರು:** ಅದನ್ನು ಕಡತದಿಂದ ತೆಗೆಸಿ ಹಾಕಿಸುತ್ತೇನೆ.

**(ಗೊಂದಲ)**

**ಶ್ರೀ ಆರ್. ರೋಷನ್ ಬೇಗ್** : ನಿನ್ನೆ ರಾತ್ರಿ ನಾನು ನಮ್ಮ ಧಾರ್ಮಿಕ ಗುರುಗಳನ್ನು ಕರೆದುಕೊಂಡು ಮುಖ್ಯಮಂತ್ರಿಗಳ ಮನೆಗೆ ಹೋದೆ, ನಮ್ಮ ಧಾರ್ಮಿಕ ಗುರುಗಳ ಶಾಂತಿ ಕಾಪಾಡಲು ಅಪೀಲ್ ಮಾಡಿದರು, ಈ ರಾಜ್ಯದಲ್ಲಿ ಯಾವುದೇ ಪ್ರತಿಭಟನೆ ಆಗಬಾರದು, ಈ ರಾಜ್ಯದಲ್ಲಿ ಯಾವುದೇ ಬಂದ್ ಆಗಬಾರದು ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳಿದ್ದರು, ಕಾನೂನು ಮಂತ್ರಿಗಳಿದ್ದರು, ಗೃಹಮಂತ್ರಿಗಳಿದ್ದರು, ನಾವೇ ಧಾರ್ಮಿಕ ಗುರುಗಳನ್ನು ಕರೆದುಕೊಂಡು ಹೋಗಿ ಸಹಕಾರ ಕೊಟ್ಟಿದ್ದೇವೆ, ನಾವೇನಾದರು ಗೂಬೆ ಕೂರಿಸುವುದಕ್ಕೆ ಪ್ರಯತ್ನಪಟ್ಟಿದ್ದೇವೆಯೇ? ಅವರು ಈ ರೀತಿ ಮಾತನಾಡಿರುವುದು ಕಡತದಿಂದ expunge ಆಗಬೇಕು.

**ಶ್ರೀ ಟಿ.ಬಿ. ಜಯಚಂದ್ರ** [ಶಿರಾ]: ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಪ್ರಮುಖವಾದ ಲೋಪ ಎದ್ದುಕಾಣುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ವಿಚಾರ ಪ್ರಸ್ತಾಪವಾದ ತಕ್ಷಣ ಒಂದು ಸವಿಸ್ತಾರವಾದ ಲಿಖಿತ ಹೇಳಿಕೆಯನ್ನು ಕೊಟ್ಟರು, ವಾಸ್ತವಿಕವಾಗಿರುವ ಸಂಗತಿಗಳನ್ನು ಸದನದ ಗಮನಕ್ಕೆ ತಂದರು. ಆದರೆ ಅದಾದ ಅರ್ಧಗಂಟೆಯಲ್ಲೇ ಇವತ್ತು ನಾವು ಟಿವಿ ಮಾಧ್ಯಮದ ಮೂಲಕ ತಿಳಿದು ಪ್ರಸ್ತಾಪ ಮಾಡಿದಾಗ, ಮುಖ್ಯಮಂತ್ರಿಗಳಾಗಲಿ ಬಂದು suo–moto ಸದನ ನಡೆಯುವಂಥ ಸಂದರ್ಭದಲ್ಲಿ ಈ ರೀತಿಯಾಗಿದೆ ಎಂದು ಹೇಳಬಹುದಾಗಿತ್ತು. ನಾವು ಡಿಮ್ಯಾಂಡ್ ಮಾಡಿದ ಮೇಲೆ

---

X X ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ).

Parliamentary Affairs Minister ಅವರು ಹೇಳಿದರು. ಎಲ್ಲೊ ಒಂದು ಕಡೆ ಏನೋ ಲೋಪವಾಗುತ್ತಿದೆ ಎಂದರೆ, ಶಿವಮೊಗ್ಗದಲ್ಲಿ incident ಆದಂಥ ಸಂದರ್ಭದಲ್ಲಿ, ಇವತ್ತು ಶಿವಮೊಗ್ಗದ ಜಿಲ್ಲಾ ಮಂತ್ರಿಗಳ್ಯಾರು ಎಂದರೆ, ಮುಖ್ಯಮಂತ್ರಿಗಳೇ ಜಿಲ್ಲಾ ಮಂತ್ರಿಗಳು, ಇವತ್ತು Intelligence ಅವರ ಕೈಯಲ್ಲಿರುವುದು. ಇದ್ದಂಥ ಸಂದರ್ಭದಲ್ಲೂ ಕೂಡ ಅರ್ಧಗಂಟೆಯಲ್ಲಿ ಇಷ್ಟೆಲ್ಲಾ ಫೈರಿಂಗ್ ಆಗಿದೆ ಎನ್ನುವ ಮಾತನ್ನು ಹೇಳುವಾಗ ಏಕೆ ಇದು ಮುಖ್ಯಮಂತ್ರಿಗಳ ಗಮನಕ್ಕೆ ಬರಲೇ ಇಲ್ಲವೇ? ಏಕೆ ಸದನದ ಶಿಷ್ಟಾಚಾರ ಉಲ್ಲಂಘನೆಯಾಗುವ ರೀತಿಯಲ್ಲಾಯಿತಲ್ಲ ಎನ್ನುವ ವಿಚಾರ. ಈಗ ಘಟನೆಯಾದ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂಬ ವಿಚಾರ ಬೇರೆ, ಆದರೆ Intelligence ಅವರ ಕೈಯಲ್ಲಿರಬೇಕಾಗಿತ್ತು. ಜಿಲ್ಲಾ ಮಂತ್ರಿಗಳಾಗಿದ್ದಾಗ, ಅವರ ಸ್ವಕ್ಷೇತ್ರದಲ್ಲೆ ಆಗಿರುವ ಸಂದರ್ಭದಲ್ಲಿ, ಇವತ್ತು ಅವರು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ವಿಫಲವಾಗಿದ್ದಾರೆಯೇ ಎನ್ನುವ ಅನುಮಾನ ಬರುವ ರೀತಿಯಲ್ಲಿ ವಿಚಾರ ಪ್ರಸ್ತಾಪ ಮಾಡುತ್ತಿದ್ದೇವೆ. ದಯಮಾಡಿ ಅವರು ಉತ್ತರವನ್ನು ಕೊಡಲಿ, ಕೊಡುವುದರ ಜೊತೆಗೆ ಇದು ಬಹಳ ಸೂಕ್ಷ್ಮವಾಗಿರುವಂಥದ್ದು. ಇವತ್ತು ಇಡೀ ರಾಜ್ಯದಲ್ಲಿ ಅಲ್ಪಸಂಖ್ಯಾತರಿರುವ ಜಾಗಗಳೇನಿವೆ, ಅಲ್ಲಿ ಅತ್ಯಂತ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿರುವ ಮಾಹಿತಿ ನಮ್ಮೆಲ್ಲರಿಗೂ ಇದೆ. ಹಾಗಾಗಿ ಈ ವಿಚಾರದಲ್ಲಿ ಆಕ್ಷನ್ ತೆಗೆದುಕೊಳ್ಳುವುದಕ್ಕಿಂತ ಹೆಚ್ಚಾಗಿ ಮುನ್ನೆಚ್ಚರಿಕೆಯ ಕಾರ್ಯಕ್ರಮಗಳನ್ನು ಏನು ತೆಗೆದುಕೊಂಡಿದ್ದರು, ತಮ್ಮ ಜಿಲ್ಲೆಯಲ್ಲೇ ವಿಫಲರಾದಲ್ಲ ಎನ್ನುವ ಆತಂಕದ ವಿಚಾರವನ್ನು ನಾನು ನಿಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

**SRI QAMARUL ISLAM:** I am not raising any other thing. The Hon'ble Chief Minister will give the statement. What is surprising me is that His Excellency the Governor has already addressed on 25th that there was no death because of the firing. There are two deaths, we read in the paper because of that firing. Hon'ble Chief Minister, who is the Chief Minister of this State, has no proper communication. He has no control

over the intelligence, he has no control over the police. Such a situation has arisen. In the newspaper, 10 years old article has been reproduced just to praoke the community. The other Urdu paper has also narrated only this much that such and such are article has come. This has spread like a fire. Hon'ble Chief Minister is not aware of that and the Deputy Commissioner ordered for firing. I want to know from the Hon'ble Chief Minister and Hon'ble Home Minister, why they not aware of the situation? We welcome the Chief Minister's statement as he said that action will be taken. We will come to know what action has been taken.

**ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:** ಕನ್ನಡದಲ್ಲಿ ಮಾತನಾಡಲಿ...

**(ಗೊಂದಲ)**

**ಶ್ರೀ ಖಮರುಲ್ ಇಸ್ಲಾಂ:** ನಾನು ಕನ್ನಡಿಗ ನನಗೆ ಕನ್ನಡ ಬರುತ್ತದೆ.

**MR.CHAIRMAN:** You go ahead.

**ಶ್ರೀ ಖಮರುಲ್ ಇಸ್ಲಾಂ:** ನಮ್ಮ ರೈಟ್ಸ್ ಏನೆಂದರೆ, ನಾನು ನಮ್ಮ mother tongue ನಲ್ಲಿ ಮಾತನಾಡುತ್ತೇನೆ, ತಾವು translation ಮಾಡಬೇಕು. ಯಾವುದೇ power cannot stop me.

**ಅಧ್ಯಕ್ಷರು:** ನೀವು ಮಾತನಾಡಿ, ನೆಹರು ಓಲೇಕರ್ ಅವರ ಅನುಮತಿ ತೆಗೆದುಕೊಳ್ಳದೇ ಸುಮ್ಮನೆ ಏತಕ್ಕೆ ಎದ್ದು ನಿಲ್ಲುತ್ತೀರಿ, ದಯವಿಟ್ಟು ಕುಳಿತುಕೊಳ್ಳಿ. He has got right to speak.

**(ಗೊಂದಲ)**

**ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:** ಕನ್ನಡದಲ್ಲಿ ಮಾತನಾಡಿ.

**ಅಧ್ಯಕ್ಷರು:** ಅವರಿಗೆ ಯಾವ ಭಾಷೆಯಲ್ಲಿ ಬೇಕಾದರೂ ಮಾತನಾಡುವುದಕ್ಕೆ ಅಧಿಕಾರವಿದೆ.

**(ಗೊಂದಲ)**

**ಶ್ರೀ ಖಮರುಲ್ ಇಸ್ಲಾಂ:** ಸರ್, ನಾನು ಮೊದಲೇ Indian.

(ಗೊಂದಲ)

**ಶ್ರೀ ಹೆಚ್.ಡಿ.ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, ಈ ರಾಜ್ಯದಲ್ಲಿ ಈ ಸರ್ಕಾರ ಬಂದ ಮೇಲೆ ಏನಾಗಿದೆ ಎಂಬುದನ್ನು ಹೇಳಬೇಕಲ್ಲ ಸರ್, ಹೇಳಬಾರದೆ? ನೀವು ಹೇಳಿದ್ದನ್ನೆ ನಾನು ಒಪ್ಪಿಕೊಳ್ಳಬೇಕೆಂದರೆ, ಸುಮ್ಮನಿರುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** [ಮುಖ್ಯಮಂತ್ರಿಗಳು]: ಈ ಮನೆಯಲ್ಲಿರುವ ಎಲ್ಲಾ ಸದಸ್ಯರು ಸೇರಿ ಈ ಅಹಿತಕರ ಘಟನೆಯನ್ನು ಕಂಟ್ರೋಲ್‌ಗೆ ತಂದು ಶಾಂತಿ ಸುವ್ಯವಸ್ಥೆ ಕಾಪಾಡಿ, ಹಿಂದು–ಮುಂಸ್ಲಿಮರು ಒಂದೇ ತಾಯಿ ಮಕ್ಕಳ ರೀತಿಯಲ್ಲಿ ಬದುಕುವುದಕ್ಕೆ ವಾತಾವರಣ ಸೃಷ್ಟಿಯಾಗಬೇಕೆಂದು ನಿಮ್ಮ ಹತ್ತಿರ ವಿನಂತಿ ಮಾಡುತ್ತೇನೆ ಅಷ್ಟೆ, ಇದರ ಮೇಲೆ ತಾವು ಹೇಗೆ ಬೇಕಾದರೂ ಮಾತನಾಡಬಹುದು, ತಮಗೆ ಸ್ವಾತಂತ್ರ್ಯವಿದೆ.

**ಶ್ರೀ ಹೆಚ್.ಡಿ. ರೇವಣ್ಣ :** ಈ ರಾಜ್ಯದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಒಂದು ಕಡೆ ಅಲ್ಪಸಂಖ್ಯಾತರಿಗೆ ಇನ್ನೊಂದು ಕಡೆ ಹಿಂದು ಮತ್ತು ಮುಸ್ಲಿಂರಿಗೆ ಹೊಡೆಯುವ ಕೆಲಸ ಮಾಡುತ್ತಿದ್ದಾರೆಂದು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ.

**ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.** : ಮಾನ್ಯ ಅಧ್ಯಕ್ಷರೆ, 1990ರಲ್ಲಿ ಎಷ್ಟರ ಮಟ್ಟಿಗೆ ಕೋಮು ಗಲಭೆ ಆಯಿತು ? ಇವರು ಸರ್ಕಾರದ ಮೇಲೆ ಈ ರೀತಿ ಹೇಳುವುದು ಸರಿ ಇಲ್ಲ. 1991ರಲ್ಲಿ ಏನಾಗಿತ್ತು ಅದನ್ನು ಹೇಳಿ. ಕರ್ನಾಟಕ ರಾಜ್ಯದಲ್ಲಿ ಆದು ಕೋಮು ಗಲಭೆಯಲ್ಲಿ ಸುಮಾರು 70 ಜನ ಸತ್ತಿದ್ದರು. ಇವರು ಈ ರೀತಿ ಹೇಳುವುದು ಸರಿ ಇಲ್ಲ.

**ಶ್ರೀ ಎಸ್. ಸುರೇಶ್‌ಕುಮಾರ್** : ಬೆಂಕಿ ಹತ್ತಿಕೊಂಡಾಗ ನೀರು ಹಾಕಬೇಕೇ ಹೊರತು ಪೆಟ್ರೋಲ್ ಹಾಕಬಾರದು.

(ಗೊಂದಲ)

**ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.** : ಯಾವ ರೀತಿ ಕಂಟ್ರೋಲ್ ಮಾಡಬೇಕೆಂದು ಸಲಹೆ ಸಹಕಾರ ಕೊಡಿ.

(ಗೊಂದಲ)

**ಶ್ರೀ ಬಂಡೆಪ್ಪ ಕಾಶಂಪೂರ್** : ಈ ಸರ್ಕಾರ ಬಂದ ಮೇಲೆ ಏನೇನಾಗಿದೆ ಎಂದು ಹೇಳುತ್ತಾರೆ. ಹೇಳುವುದಕ್ಕಾದರೂ ಸಮಯ ಕೊಡಿ. ಈ ಸರ್ಕಾರ ಬಂದ ಮೇಲೆ ಏನೇನಾಯಿತು ಎಂದು ಬಿಡಿಸಿ ಹೇಳುತ್ತಾರೆ ಕುಳಿತುಕೊಳ್ಳಿ.

**ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು** : ನೀವು ಏನೇನು ಮಾಡಿದ್ದೀರಿ ಎಂದು ಎಲ್ಲರಿಗೂ ಗೊತ್ತಿದೆ. ನಿಮ್ಮ ಬಂಡವಾಳ ಎಲ್ಲರಿಗೂ ಗೊತ್ತಿದೆ.

**ಅಧ್ಯಕ್ಷರು** : ಕುಮಾರಸ್ವಾಮಿಯವರೇ ದಯವಿಟ್ಟು ಕುಳಿತುಕೊಳ್ಳಿ. ನಾನು ನಿಮಗೆ ಅವಕಾಶ ಕೊಟ್ಟಿಲ್ಲ.

**ಶ್ರೀ ಹೆಚ್.ಡಿ. ರೇವಣ್ಣ** : ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಶಿವಮೊಗ್ಗ ಮತ್ತು ಹಾಸನ ಎರಡೂ ಕಡೆ ಏಕ ಕಾಲದಲ್ಲಿ ಅಲ್ಪಸಂಖ್ಯಾತರ ಮೇಲೆ ಗಲಾಟೆ ನಡೆದಿದೆ, ನಿನ್ನೆ ಹಾಸನ ಜಿಲ್ಲೆಯಲ್ಲಿ ಶಾಂತ ರೀತಿಯಿಂದ ಸುಮಾರು 15 ರಿಂದ 20 ಸಾವಿರ ಜನ ಅಲ್ಪಸಂಖ್ಯಾತರ ಸಮಾಜದವರು ಶಾಂತ ರೀತಿಯಿಂದ ಪತ್ರಿಕೆಯಲ್ಲಿ ಬಂದಿರುವುದರ ವಿರುದ್ಧ ಪ್ರತಿಭಟನೆ ಮಾಡಿದರು. ಅವರು ಯಾವುದೇ ಪ್ರಚೋದನೆ ಮಾಡಿಲ್ಲ.

**ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು** : ನಿಮ್ಮ ಕಾಲದಲ್ಲಿ ಏನಾಗಿದೆ ಎಂದು ಹೇಳಿ.

**ಶ್ರೀ ಹೆಚ್.ಡಿ. ರೇವಣ್ಣ** : ದಯಮಾಡಿ ಏನೇನು ಹೇಳಬೇಕೆಂದು ಬರೆದು ಕೊಡಿ. ನಿಮ್ಮ ಗೃಹ ಸಚಿವರು, ಕಾನೂನು ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಬರೆದು ಕೊಡಲಿ ಅದೇ ತರಹ ಹೇಳುತ್ತೇನೆ. ದಯಮಾಡಿ ನಾವು ಹೇಳುವವರೆಗೆ ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುವಾಗ ನಾವು ಸುಮ್ಮನೆ ಕುಳಿತುಕೊಳ್ಳುವುದಿಲ್ಲವಾ ?

**ಶ್ರೀ ಕೆ.ಎಂ. ಶಿವಲಿಂಗೇಗೌಡ** : ವಿರೋಧ ಪಕ್ಷದ ಯಾವ ಸದಸ್ಯರು ಮಾತನಾಡಿದರೂ ವಿರೋಧ ಮಾಡುತ್ತೀರಿ. ವಿರೋಧ ಪಕ್ಷವೇನು ನಿಮಗೆ ಲೆಕ್ಕಕ್ಕೆ ಇಲ್ಲವಾ ? ವಿರೋಧ ಪಕ್ಷದ ಮೇಲೆ ದಬ್ಬಾಳಿಕೆ ಮಾಡುತ್ತಿದ್ದೀರಾ ? ವಿರೋಧ ಪಕ್ಷದ ಸದಸ್ಯರನ್ನು ಹೆದರಿಸುವುದಕ್ಕೆ ಎದ್ದು ನಿಲ್ಲುತ್ತೀರಿ, ಏನಿದು?

ಏನೂ ಹೇಳುವ ಹಾಗೆಯೇ ಇಲ್ಲವಾ ? ಪ್ರಜಾಪ್ರಭುತ್ವ ಎಂದರೆ ಏನೆಂದು ತಿಳಿದುಕೊಂಡಿದ್ದೀರಿ ?

**ಅಧ್ಯಕ್ಷರು** : ಮಾನ್ಯ ಶಂಕರಲಿಂಗೇಗೌಡರೇ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ** : ವಿರೋಧ ಪಕ್ಷದವರೇ ಎತ್ತಿ ಕಟ್ಟುತ್ತಿರುವುದು.

**ಶ್ರೀ ಹೆಚ್.ಡಿ. ರೇವಣ್ಣ** : ಮಾನ್ಯ ಸಭಾಧ್ಯಕ್ಷರೆ, ಮಂತ್ರಿಗಳು ಸ್ವಲ್ಪ ತಾಳ್ಮೆಯಿಂದ ಇರಬೇಕು. ಯಾರ್ಯಾರು ಗಲೀಜು ಕೆಲಸ ಮಾಡಿದ್ದಾರೆ, ಯಾರ್ಯಾರು ಏನೇನು ಮಾಡಿದ್ದಾರೆಂದು ಸಮಯ ಬಂದಾಗ ಹೇಳೋಣ. ನಿಮ್ಮಿಂದೇನು ನಾವು ಪಾಠ ಕಲಿಯಬೇಕಾಗಿಲ್ಲ. ಮಾನ್ಯ ಅಧ್ಯಕ್ಷರೆ ದಯಮಾಡಿ ಮಂತ್ರಿಗಳಿಗೆ ಹೇಳಿ. ಇಲ್ಲದಿದ್ದರೆ ನಾನು ಕುಳಿತುಕೊಳ್ಳುತ್ತೇನೆ. ವಿರೋಧ ಪಕ್ಷದವರು ಮಾತನಾಡುವುದು ಬೇಡವೆಂದರೆ ಹೇಳಿ. ಶಾಂತ ರೀತಿಯಿಂದ ಸುಮಾರು 15 ರಿಂದ 20 ಸಾವಿರ ಜನ ಮೆರವಣಿಗೆ ಮಾಡುತ್ತಿದ್ದರು. ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರದ ವಿರುದ್ಧ ಗಲಭೆ ಮಾಡಿ ಅಶಾಂತಿ ಉಂಟು ಮಾಡಬೇಕೆಂಬ ಯಾವುದೇ ದುರುದ್ದೇಶ ಇಲ್ಲ. ಮೆರವಣಿಗೆ ಮುಗಿದ ಮೇಲೆ ಯಾರು ಮಾಡಿದರು ಏನು ಮಾಡಿದರು ಎಂದು ಸರ್ಕಾರ ವರದಿ ತರಿಸಲಿ. ಅಲ್ಪಸಂಖ್ಯಾತರ ಅಂಗಡಿಗಳಿಗೆ ಬೆಂಕಿ ಹಾಕಿದ್ದರಿಂದ, ಆಟೋರಿಕ್ಷಾಗಳಿಗೆ ಬೆಂಕಿ ಹಾಕಿದ್ದರಿಂದ, ವೆಹಿಕಲ್‌ಗಳಿಗೆ ಬೆಂಕಿ ಹಾಕಿದ್ದರಿಂದ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ. ಕಳೆದ 18 ತಿಂಗಳುಗಳಿಂದ ನಮ್ಮ ಜಿಲ್ಲೆಯಲ್ಲಿ ಯಾವುದೇ ಗಲಾಟೆ ಆಗಿರಲಿಲ್ಲ. ಅಲ್ಪಸಂಖ್ಯಾತರ ಮೇಲೆ ಯಾವುದೇ ರೀತಿಯ ದಾಳಿಗಳೂ ಆಗಿರಲಿಲ್ಲ. ನಾವು ಶಾಂತಿ ಕಾಪಾಡಲಿಲ್ಲವೆಂದು ದಯಮಾಡಿ ಮಾನ್ಯ ಗೃಹ ಸಚಿವರು ಹೇಳಲಿ. ಈ ಸರ್ಕಾರ ಬಂದ ಮೇಲೆ ನಮ್ಮ ಜಿಲ್ಲೆಯಲ್ಲಿ ಯಾವುದಾದರೂ ಇಂತಹ ಸನ್ನಿವೇಶ ಬಂದಿತ್ತಾ ? ಪತ್ರಿಕಾ ವರದಿ ಪ್ರಕಾರ ಅದರಲ್ಲಿಯೂ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಯುವಕರು ಇಬ್ಬರು ಸತ್ತು ಹೋಗಿದ್ದಾರೆ. ಮಾನ್ಯ

ಮುಖ್ಯಮಂತ್ರಿಗಳು ನೆನ್ನೆ ಸದನದಲ್ಲಿ ಹೇಳಿಕೆ ಕೊಟ್ಟಂತಹ ಸಂದರ್ಭದಲ್ಲಿ ನಾನು ಇರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಇಬ್ಬರು ಸತ್ತು ಹೋಗಿರುವ ವಿಷಯ ಮುಚ್ಚಿಟ್ಟಿರುವ ಬಗ್ಗೆ ಅವರ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್‌ನಿಂದ ಏನಾದರೂ ಸುಳ್ಳು ಹೇಳಿದ್ದಾರೋ ? ಅಥವಾ ಮಾನ್ಯ ಮುಖ್ಯಮಂತ್ರಿಗಳೇ ಇದನ್ನು ಮುಚ್ಚಿಟ್ಟು ರಾಜ್ಯದಲ್ಲಿ ಮತ್ತೇನಾದರೂ ಆಗುತ್ತದೆ ಎನ್ನು ಉದ್ದೇಶಕ್ಕಾಗಿ ಹೇಳಿದ್ದಾರೋ ನಾನು ಅದರ ಬಗ್ಗೆ ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಸತ್ತು ಹೋದವರ ಕುಟುಂಬ ಇರಬಹುದು, ಎರಡೂ ಜಿಲ್ಲೆಗಳಲ್ಲಿ ಸುಮಾರು ಲಕ್ಷಾಂತರ ರೂಪಾಯಿಗಳಷ್ಟು ನಷ್ಟವಾಗಿದೆ. ಚಿಕ್ಕಮಗಳೂರು ಇರಬಹುದು, ಶಿವಮೊಗ್ಗ ಇರಬಹುದು ಹಾಸನ ಜಿಲ್ಲೆ ಇರಬಹುದು, ಅಲ್ಪಸಂಖ್ಯಾತರಿಗೆ ನಾವು ಪರಿಹಾರ ಕೊಡುತ್ತೇವೆಂದು ಇವತ್ತು ಸರ್ಕಾರ ಹೇಳಬೇಕಾಗುತ್ತದೆ. ಇಷ್ಟೆಲ್ಲಾ ನಷ್ಟ ಆದರೂ ಅಲ್ಪಸಂಖ್ಯಾತರು ಇವತ್ತು ಶಾಂತ ರೀತಿಯಿಂದ ಇದ್ದಾರೆ. ಲಕ್ಷಾಂತರ ರೂಪಾಯಿಗಳ ಅಂಗಡಿ, ಮಳಿಗೆ ಹಾಗೂ ವೆಹಿಕಲ್‌ಗಳನ್ನು ಕಳೆದುಕೊಂಡರೂ ಅವರ ಶಾಂತ ರೀತಿಯಿಂದ ಇದ್ದಾರೆ. ಒಬ್ಬರೂ ಗಲಾಟೆ ಮಾಡಿಲ್ಲ. ಕುಚೋದನೆ ಯಾರು ಮಾಡುತ್ತಿದ್ದಾರೆಂದು ಅವರು ವರದಿ ತರಿಸಿಕೊಳ್ಳಲಿ. ನಾನು ಬಹಿರಂಗವಾಗಿ ಹೇಳವುದಿಲ್ಲ. ಯಾರ್‍ಯಾರು ಕುಚೋದನೆ ಮಾಡುತ್ತಿದ್ದಾರೆ, ಇದರ ಹಿಂದೆ ಯಾರಿದ್ದಾರೆ, ರಾಜ್ಯದಲ್ಲಿ ಅಶಾಂತಿ ಉಂಟು ಮಾಡುತ್ತಿರುವವರು ಯಾರು ? ಅಲ್ಪಸಂಖ್ಯಾತರು ಮಾಡುತ್ತಿದ್ದಾರೋ, ಹಿಂದುಗಳು ಎಲ್ಲರೂ ಮಾಡುತ್ತಿಲ್ಲ. ಈ ವಿಧಾನಸಭೆ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ಮೇಲೆ ಕಪ್ಪು ಚುಕ್ಕೆ ಇರುವುದಕ್ಕಾಗಿ ಇದನ್ನು ನಡೆಸಿದ್ದಾರೆ. ಈ ಸರ್ಕಾರ ಬಂದ 18 ತಿಂಗಳಲ್ಲಿ ಏನು ನಡೆದಿದೆ ಎಂದು ನಾನು ಹೇಳಬೇಕಾಗಿಲ್ಲ, ಇಡೀ ರಾಜ್ಯಕ್ಕೆ ಗೊತ್ತಿದೆ. ಶಿವಮೊಗ್ಗದಲ್ಲಿ ತೀರಿ ಹೋಗಿರುವ ಇಬ್ಬರು ಅಲ್ಪಸಂಖ್ಯಾತ ಯುವಕರಿಗೆ ಸರ್ಕಾರ ಪರಿಹಾರ ಘೋಷಣೆ ಮಾಡಬೇಕು. ಜೊತೆಗೆ ಅಲ್ಪಸಂಖ್ಯಾತರು ಇರಬಹುದು ಹಿಂದುಳಗು ಇರಬಹುದು, ಯಾರ್‍ಯಾರ ಅಂಗಡಿಗಳಿಗೆ ನಷ್ಟವಾಗಿದೆ, ಅದು ಎಷ್ಟೇ ಇದ್ದರೂ ಸರ್ಕಾರ

ಪೂರ್ಣ ಪರಿಹಾರ ಕೊಡಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹ ಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ.

**ಅಧ್ಯಕ್ಷರು** : ನೆಹರು ಓಲೇಕಾರ್‌ರವರೇ ಎದ್ದು ನಿಂತುಕೊಳ್ಳುವುದಕ್ಕೆ ಅನುಮತಿ ತೆಗೆದುಕೊಳ್ಳಬೇಕು. ಇದು ಒಳ್ಳೆಯದಲ್ಲ ದಯವಿಟ್ಟು ಕುಳಿತುಕೊಳ್ಳಿ. ನೀವು ಪ್ರತಿ ಸಲ ಎದ್ದು ನಿಲ್ಲುತ್ತೀರಿ. It is not fair.

**ಶ್ರೀ ಬಿ.ಎಸ್. ಯಡಿಯೂರಪ್ಪ** (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ನಾನು ಇಲ್ಲಿ ಎದ್ದು ನಿಂತು ಉತ್ತರ ಕೊಡುವಂತಹ ಸಂದರ್ಭದಲ್ಲಿ ನನಗೇನು ಅಧಿಕಾರಿಗಳು ಮಾಹಿತಿ ಕೊಟ್ಟರು, ಆ ನಿಮಿಷದವರೆಗೆ ಏನು ಘಟನಾವಳಿಗಳು ನಡೆದಿದ್ದವು ಆ ಸತ್ಯಾಂಶಗಳನ್ನು ಲಿಖಿತ ಮೂಲಕ ನಾನು ಉತ್ತರವನ್ನು ಕೊಟ್ಟಿದ್ದೇನೆ. ಇಲ್ಲಿಂದ ನೇರವಾಗಿ ಎಲ್ಲಾ ಉನ್ನತ ಪೊಲೀಸ್ ಅಧಿಕಾರಿಗಳನ್ನು ಕರೆದುಕೊಂಡು ಸುಮಾರು ಎರಡು ಗಂಟೆ ಕಾಲ ಮಾನ್ಯ ಗೃಹ ಸಚಿವರನ್ನು ಇಟ್ಟುಕೊಂಡು ರಾಜ್ಯದ ಸ್ಥಿತಿಗತಿಗಳನ್ನು ಸವಿಸ್ತಾರವಾಗಿ ಚರ್ಚೆ ಮಾಡಿದ್ದೇನೆ. ಅದಾದ ಮೇಲೆ ತಾವು ಮಾನ್ಯ ರೋಷನ್‌ಬೇಗ್‌ರವರು, ಮಾನ್ಯ ಅಬ್ದುಲ್ ಅಜೀಂರವರು, ಮಾನ್ಯ ನಜೀರ್ ಅಹಮದ್ ಮಾನ್ಯ ಹ್ಯಾರಿಸ್‌ರವರು ಅನೇಕ ಮುಸ್ಲಿಂ ಮುಖಂಡರು ಧಾರ್ಮಿಕ ಗುರುಗಳನ್ನು ಕರೆದುಕೊಂಡು ಕೃಷ್ಣಗೆ ಬಂದರು. ಚರ್ಚೆ ಮಾಡಿದೆವು. ತತ್‌ಕ್ಷಣ ನಾವು ಏನೇನು ಕ್ರಮ ಕೈಗೊಂಡಿದ್ದೇವೆಂದು ತಿಳಿಸಿದೆವು, ಒಟ್ಟಿಗೆ ಜಾಯಿಂಟ್ ಪ್ರೆಸ್ ಮೀಟ್ ಮಾಡಿ ಇಡೀ ರಾಜ್ಯದ ಜನತೆಗೆ ಯಾವುದೇ ರೀತಿಯ ಬಂದ್, ಮೆರವಣಿಗೆ ಮಾಡಕೂಡದು ಎಂದು ಜಂಟಿ ಪತ್ರಿಕಾಗೋಷ್ಟಿಯ ಮೂಲಕ ಜನರಿಗೆ ತಿಳಿಸುವ ಪ್ರಯತ್ನ ಮಾಡಿದೆವು. ಭಾನುವಾರ ಕನ್ನಡ ಪ್ರಭ ಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದಂಥ ಲೇಖನದ ಹಿನ್ನಲೆಯಲ್ಲಿ ಶಿವಮೊಗ್ಗ, ಹಾಸನದಲ್ಲಿ ಪಕ್ಷುಬ್ಧ ವಾತಾವರಣ ಉಂಟಾಯಿತು. ತಸ್ಲಿಮಾ ನಸ್ರಿನ್ ಎಂಬ ಬಾಂಗ್ಲಾ ಲೇಖಕಿ ಬರೆದ ಲೇಖನದ ಅನುವಾದ ನಿನ್ನೆ ರಾತ್ರಿ ಪತ್ರಿಕೆಯಲ್ಲಿ ಪ್ರಕಟವಾದ ಪರಿಣಾಮ ಈ ಘಟನಾವಳಿಗಳು ನಡೆದಿವೆ. ನಾನು ತಕ್ಷಣ ಅಲ್ಲಿ ಏನು ಘಟನಾವಳಿಗಳು ನಡೆಯಿತು ಎಂಬ ಬಗ್ಗೆ ಅದರ ವಿವರಕ್ಕೆ ನಾನು

ಹೋಗುವುದಿಲ್ಲ. ಶಾಂತಿ ಸುವ್ಯವಸ್ಥೆ ಕಾಪಾಡಬೇಕು ಎನ್ನುವ ಸದುದ್ದೇಶ ನಮ್ಮಲ್ಲಿರುವುದರಿಂದ ನಾನು ವಿವರವಾದಂಥ ಮಾಹಿತಿಗಳನ್ನು ಕೊಡುವ ಸಂದರ್ಭವೂ ಇಲ್ಲ, ಅದರ ಅಗತ್ಯತೆಯೂ ಇಲ್ಲ. ನಮ್ಮ ನಿಮ್ಮೆಲ್ಲರ ಅಪೇಕ್ಷೆ ಇದನ್ನು ಕಂಟ್ರೋಲ್‌ಗೆ ತರಬೇಕು ಎಂಬುದೇ ಉದ್ದೇಶವಾಗಿದೆ. ಶಿವಮೊಗ್ಗದಲ್ಲಿ ಕನ್ನಡಪ್ರಭ ಪತ್ರಿಕೆಯ ವಿರುದ್ಧ 9 ಪ್ರಕರಣಗಳು ದಾಖಲಾಗಿವೆ. ದಸ್ತಗಿರಿಯಾದವರ ಸಂಖ್ಯೆ 57 ಜನ. ಜಖಂಗೊಂಡ ಅಂಗಡಿಗಳ ಸಂಖ್ಯೆ 50. ಜಖಂಗೊಂಡ ವಾಹನಗಳ ಸಂಖ್ಯೆ 30. ಗಾಯಗೊಂಡವರ ಸಂಖ್ಯೆ 24. ಗಾಯಗೊಂಡ ಪೊಲೀಸ್‌ನವರ ಸಂಖ್ಯೆ 16. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ 2. ಪೊಲೀಸ್ ಗೋಲಿಬಾರ್‌ನಲ್ಲಿ ಸತ್ತ ಯುವಕ ಸಾದಿಕ್‌ನ ವಯಸ್ಸು 23 ವರ್ಷ. ಗುಂಪಿನಲ್ಲಿ ಸಾವಿಗೀಡಾದವನು ಅಬ್ದುಲ್ ಲತೀಫ್ 45 ವರ್ಷ. ನಿನ್ನೆ ರಾತ್ರಿ ಕರ್ಫ್ಯೂವನ್ನು ಜಾರಿಗೊಳಿಸಲಾಗಿದೆ. ನಿನ್ನೆ ಸಂಜೆಯಿಂದ ಯಾವುದೇ ಅಹಿತಕರ ಘಟನೆ ಶಿವಮೊಗ್ಗದಲ್ಲಿ ನಡೆದಿಲ್ಲ. ಸಿ.ಆರ್.ಪಿ.ಎಫ್.ನ ಕ್ಷಿಪ್ರ ಕಾರ್ಯಾಚರಣೆ ಪಡೆ ಒಂದೆರಡು ಗಂಟೆಗಳಲ್ಲಿ ಶಿವಮೊಗ್ಗಕ್ಕೆ ತಲುಪಿತು. ಪೂರ್ವ ವಲಯದ ಐ.ಜಿ.ಪಿ. ಯವರು ಶಿವಮೊಗ್ಗದಲ್ಲಿ ಮೊಕಾಂ ಹೂಡಿದ್ದಾರೆ. ಇದು ಶಿವಮೊಗ್ಗಕ್ಕೆ ಸಂಬಂಧಪಟ್ಟಂತೆ ಮಾಹಿತಿ. ಇನ್ನು ರೇವಣ್ಣನವರಿಗೆ ಹಾಸನದಲ್ಲಿ ಏನಾಯಿತು ಎಂಬ ಬಗ್ಗೆ ಅವರಿಗೂ ಮಾಹಿತಿ ಇದೆ. ಅಲ್ಲಿಯೂ ಸಹ ಕನ್ನಡಪ್ರಭ ಪತ್ರಿಕೆ ವಿರುದ್ಧ ದೂರುಗಳು ದಾಖಲಾಗಿವೆ. ಹಾಸನ ಜಿಲ್ಲೆಯಲ್ಲಿ ದಸ್ತಗಿರಿಯಾದವರ ಸಂಖ್ಯೆ 46. ಜಖಂಗೊಂಡ ಅಂಗಡಿಗಳ ಸಂಖ್ಯೆ 24. ಜಖಂಗೊಂಡ ವಾಹನಗಳ ಸಂಖ್ಯೆ 20. ಗಾಯಗೊಂಡವರ ಸಂಖ್ಯೆ 9. ಗಾಯಗೊಂಡ ಪೊಲೀಸಿನವರ ಸಂಖ್ಯೆ 9. ಅಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಸಿ.ಆರ್.ಪಿ.ಎಫ್.ನ ಕ್ಷಿಪ್ರ ಕಾರ್ಯಾಚರಣೆ ಪಡೆ ಈಗ ಯಾವುದೇ ಕ್ಷಣದಲ್ಲಿ ಹಾಸನ ತಲುಪುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ. ದಕ್ಷಿಣ ವಲಯ ಐ.ಜಿ.ಪಿ.ಯವರು ಹಾಸನದಲ್ಲಿ ಮೊಕಾಂ ಹೂಡಿದ್ದಾರೆ. ಕಳೆದ ರಾತ್ರಿ ಯಾವುದೇ ಘಟನೆಗಳು ಅಲ್ಲಿ ನಡೆದಿಲ್ಲ. ಇಡೀ ರಾಜ್ಯದಲ್ಲಿ ನಮ್ಮ ಪೊಲೀಸ್ ಅಧಿಕಾರಿಗಳು ಇಡೀ

ರಾತ್ರಿಯಲ್ಲಿ ನನ್ನ ಜೊತೆ ಸಂಪರ್ಕದಲ್ಲಿದ್ದರು, ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೋಸ್ಕರ ಅವರು ಶಕ್ತಿಮೀರಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿ ಇದೆಲ್ಲವನ್ನೂ ಕಂಟ್ರೋಲ್‌ಗೆ ತರುವಂಥ ಪ್ರಯತ್ನವನ್ನು ಮಾಡಿದ್ದಾರೆ. ಇನ್ನು ಗೈಡ್‌ಲೈನ್ಸ್ ಪ್ರಕಾರ ಯಾವ ರೀತಿ ಪರಿಹಾರವನ್ನು ಕೊಡಬೇಕಾಗಿದೆಯೋ ಆ ಪರಿಹಾರವನ್ನು ಕೊಡಬೇಕಾದದ್ದು ನಮ್ಮ ಸರ್ಕಾರದ ಕರ್ತವ್ಯ. ಇದಲ್ಲದೇ ಯಾವ ಅಂಗಡಿ ಮುಂಗಟ್ಟುಗಳಿಗೆ ಲಾಸ್ ಆಗಿದೆಯೋ, ಅಂದರೆ ಸಾಮಾನ್ಯವಾಗಿ ಮುಗ್ಧರು ತಾನೇ ಅಂಗಡಿ ಮುಂಗಟ್ಟುಗಳನ್ನು ಕಳೆದುಕೊಳ್ಳುವಂಥವರು, ಅವರಿಗೆ ಏನು ಪರಿಹಾರವನ್ನು ಕೊಡಬೇಕೋ ಅದರ ಬಗ್ಗೆ, ಅಲ್ಲಿಗೆ ಹೋಗಿ ಕುಳಿತು ವಾಸ್ತವಿಕವಾದ ಒಂದು ವರದಿಯನ್ನು ತರಿಸಿಕೊಂಡು ಜಾತಿ ಕುಲ ಗೋತ್ರ ಏನೂ ನೋಡದೆಯೇ ಆಗಿರುವ ಲಾಸ್‌ನ್ನು ತುಂಬಿಕೊಡೋಣ. ನಿನ್ನೆ ರಾತ್ರಿಯೇ ನಾವೆಲ್ಲರೂ ಚರ್ಚೆ ಮಾಡುತ್ತಿರುವಂಥ ಕಾಲದಲ್ಲಿ ಈಶ್ವರಪ್ಪನವರು ನಾನು ಆ ಕ್ಷೇತ್ರದ ಶಾಸಕನೆಂದು ತಿಳಿದು ತಕ್ಷಣವೇ ರಾತ್ರಿಯೇ ನಾನು ಅವರನ್ನು ಶಿವಮೊಗ್ಗಕ್ಕೆ ಕಳುಹಿಸಿಕೊಟ್ಟೆ, ಅವರು ಹಿಂದೂ ಮುಸ್ಲಿಂನ ಎಲ್ಲರ ಜೊತೆ ಮಾತನಾಡಿ ಅಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಬೇಕೆಂದು ಈ ರೀತಿ ಮಾಡಿದೆ. ನಾನು ಈ ಮನೆಯಲ್ಲಿ ವಿನಂತಿ ಮಾಡುವುದೇನೆಂದರೆ, ಅನಿರೀಕ್ಷಿತವಾದ ಘಟನೆಯಾಗಿದೆ. ಯಾರು ಈ ಲೇಖನವನ್ನು ಪ್ರಕಟ ಮಾಡಿದ್ದಾರೆ, ಆ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕು, ಉಳಿದಂಥ ಸಂಗತಿಗಳು ಏನು ನೋಡಿ ಕ್ರಮ ತೆಗೆದುಕೊಳ್ಳೋಣ. ನಿನ್ನೆ ಮೂರು ಬಾರಿ ಕೇಂದ್ರದ ಗೃಹ ಸಚಿವರ ಜೊತೆ ನಾನು ಮಾತನಾಡಿದ್ದೇನೆ. ಇವತ್ತು ಬೆಳಿಗ್ಗೆ ಕೂಡ ನಾನು ಚಿದಂಬರಂ ಜೊತೆ ಮಾತನಾಡಿ ಏನು ಇಲ್ಲಿ ನಡೆದಿದೆ, ಯಾವ ರೀತಿಯಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದೇವೆ ಎಂಬ ಈ ಎಲ್ಲ ಸಂಗತಿಗಳನ್ನು ಅವರಿಗೆ ಮನವರಿಕೆ ಮಾಡುವಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ. ಬಹುಶ: ನಿನ್ನೆ ಸಹ ಸ್ವತ: ತಾವೆಲ್ಲರೂ ಇದ್ದಿರಿ, ನಾನು ಯಾವ ರೀತಿ ನಡೆದುಕೊಂಡಿದ್ದೇನೆ ಎನ್ನುವಂಥದ್ದನ್ನು ರೋಷನ್‌ಬೇಗ್‌ರವರು ಕೂಡ ನೋಡಿದ್ದಾರೆ. ಅವರೇ ಸಾಕ್ಷಿಯಾಗಿದ್ದರು. ನೀವು ನಾವೆಲ್ಲರೂ ಕುಳಿತು ಸಲಹೆ

ಪಡೆದು ಬಿಗಿ ತರುವಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ. ಈ ಮನೆಯಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಇಲ್ಲಿ ಯಾವುದೇ ಕಾರಣಕ್ಕೆ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುವುದರಲ್ಲಿ ಒಂದು ಸಣ್ಣ ಕೊರತೆ ಆಗುವುದಕ್ಕೆ ನಾನು ಬಿಡುವುದಿಲ್ಲ. ಅವರಿಗೆ ರಕ್ಷಣೆ ಕೊಡುವುದು ನಮ್ಮ ಕರ್ತವ್ಯ. ಈ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಂಥದ್ದು ಮೊದಲು ನಮ್ಮ ಆದ್ಯ ಕರ್ತವ್ಯ. ಅದು ಯಾವುದೇ ಸರ್ಕಾರವಿರಬಹುದು, ಯಾವುದೇ ಸಮಾಜದವರಿರಬಹುದು, ಆದುದರಿಂದ ಈ ಘಟನಾವಳಿಗಳು ಯಾವುದೇ ಕಾರಣಕ್ಕೆ ಮರುಕಳಿಸುವುದಕ್ಕೆ ಅವಕಾಶ ಸಿಗದ ರೀತಿಯಲ್ಲಿ ನಮ್ಮಲ್ಲಿ ಇಲ್ಲಿ ಚರ್ಚೆಯಾಗಬೇಕು ಎಂದು ನಿಮ್ಮಲ್ಲಿ ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತೇನೆ. ನನಗೆ ವಿಶ್ವಾಸವಿದೆ, ನಮ್ಮ ಪೊಲೀಸ್ ಅಧಿಕಾರಿಗಳು ಈ ಕಡೆ ವಿಶೇಷವಾದ ಗಮನವನ್ನು ಕೊಟ್ಟಿದ್ದಾರೆ. ಗೃಹ ಸಚಿವರು ಮತ್ತು ನಾವು ನಿನ್ನೆ ಇಡೀ ರಾತ್ರಿಯೆಲ್ಲಾ ಕುಳಿತುಕೊಂಡು ಅಲ್ಲಿ ಕಂಟ್ರೋಲ್ ತರುವಂಥ ಏನೆಲ್ಲಾ ಪ್ರಯತ್ನವನ್ನು ಮಾಡಬೇಕೋ ಅದನ್ನು ನಾವು ಮಾಡಿದ್ದೇವೆ. ನಾನು ಈ ಮನೆಯ ಮೂಲಕ ನಾಡಿನ ಜನರಲ್ಲಿ ಅತ್ಯಂತ ವಿನಯದಿಂದ ವಿನಮ್ರತೆಯಿಂದ ಪ್ರಾರ್ಥನೆ ಮಾಡುತ್ತೇನೆ, ದಯಮಾಡಿ ಕಾನೂನನ್ನು ಕೈಗೆ ತೆಗೆದುಕೊಳ್ಳುವಂಥ ಪ್ರಯತ್ನವನ್ನು ಮಾಡಬೇಡಿ. ಯಾರೇ ವ್ಯಕ್ತಿಗಳು ಈ ವಾತಾವರಣವನ್ನು ಉಪಯೋಗ ಮಾಡಿಕೊಂಡು ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರುವಂಥ ಪ್ರಯತ್ನವನ್ನು ಮಾಡಿದರೆ ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈ ವಿಚಾರದಲ್ಲಿ ಹಿಂದು ಮುಂದು ನೋಡುವುದಿಲ್ಲವೆನ್ನುವ ಭರವಸೆಯನ್ನು ನಾನು ನಿಮಗೆ ಕೊಡುತ್ತಿದ್ದೇನೆ. ನನಗನ್ನಿಸುತ್ತದೆ, ನಾವು ಮತ್ತು ನೀವುಗಳೆಲ್ಲರೂ ಮನಸ್ಸು ಮಾಡಿದರೆ, ನಮ್ಮ ವಿಧಾನಸಭಾ ಕ್ಷೇತ್ರಗಳಿಗೆ ಸೂಚನೆಯನ್ನು ಕೊಟ್ಟು ಎಲ್ಲರೂ ಶಾಂತಿಯನ್ನು ಕಾಪಾಡಿ ಎಂದು ಹೇಳಿದರೆ ಜನರು ಸ್ಪಂದಿಸುವುದಕ್ಕೆ ಸಿದ್ಧರಿದ್ದಾರೆ. ಯಾರಿಗೂ ಈ ರೀತಿಯ ಗಲಾಟೆಗಳು ಬೇಕಾಗಿಲ್ಲ. ಅನಗತ್ಯವಾಗಿ ಯಾರೋ ಸ್ವಾರ್ಥಿಗಳು ಕೆಲವರು ಈ ರೀತಿ ಮಾಡುತ್ತಿರುವಂಥದ್ದು. ಈ ಘಟನೆ ಇಷ್ಟು ದೊಡ್ಡ ಮಟ್ಟದಲ್ಲಿ ನಡೆಯುವುದಕ್ಕೆ

11.20 ಎ.ಎಂ.

ಸಾಧ್ಯತೆಯೇ ಇರಲಿಲ್ಲ. ಆದರೆ ಆಗಿದೆ. ಇದನ್ನು ಬಿಗಿ ಮಾಡುವುದಕ್ಕೆ ಏನೇನು ಸಾಧ್ಯವಿದೆ ಅದೆಲ್ಲ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ದಯಮಾಡಿ ತಾವೆಲ್ಲರೂ ಸಹಕರಿಸಬೇಕೆಂದು ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ಇನ್ನು ಪರಿಹಾರವನ್ನು ಏನು ಕೊಡಬೇಕಾಗುತ್ತದೋ ಅದನ್ನು ತಕ್ಷಣ ಕೊಡುವ ವ್ಯವಸ್ಥೆಯನ್ನು ನಾನು ಮಾಡಿಸುತ್ತೇನೆ.

**ಶ್ರೀ ಸಿದ್ದರಾಮಯ್ಯ** (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ನಾವು ಕೂಡ ಜನರಲ್ಲಿ ನಿನ್ನೆ ಕೂಡ ಮನವಿ ಮಾಡಿದ್ದೇವೆ. ಇಂದು ಕೂಡ ಮನವಿ ಮಾಡುತ್ತೇವೆ. ಇಡೀ ರಾಜ್ಯದಲ್ಲಿ ಎಲ್ಲಾ ಜನರು ಕೂಡ ಶಾಂತಿಯಿಂದ ಇರಬೇಕು. ಜನರು ಯಾವುದೇ ಸುಳ್ಳು ವದಂತಿಗಳಿಗೆ ಕಿವಿಗೊಡಬಾರದು. ಯಾರೂ ಕೂಡ ಯಾವುದೇ ಉದ್ವೇಗಕ್ಕೆ ಒಳಗಾಗಬಾರದು. ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡಬೇಕಾದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಯಾವುದೇ ಸರ್ಕಾರವಿರಲಿ, ಯಾವುದೇ ಪಕ್ಷದ ಸರ್ಕಾರವಿರಲಿ. ಈ ರಾಜ್ಯದಲ್ಲಿರತಕ್ಕಂಥ ಎಲ್ಲ ಜನರಿಗೆ ರಕ್ಷಣೆ ಕೊಡಬೇಕಾಗಿರತಕ್ಕಂಥದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಜನರ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡಬೇಕಾದ್ದು ಸರ್ಕಾರದ ಜವಾಬ್ದಾರಿ. ಜನರ ಮಾನ ಮರ್ಯಾದೆಯನ್ನು ಕಾಪಾಡಬೇಕಾದಂಥದ್ದು ಸರ್ಕಾರದ ಜವಾಬ್ದಾರಿ. ಅಲ್ಪಸಂಖ್ಯಾತರು ಆತಂಕದಿಂದ ಬದುಕಬಾರದು, ಅವರಿಗೂ ಇಲ್ಲಿ ರಕ್ಷಣೆ ಇದೆ ಎನ್ನುವಂಥ ಭಾವನೆ ಅವರಲ್ಲಿ ಬರುವಂಥ ರೀತಿಯಲ್ಲಿ ಸರ್ಕಾರಗಳು ನಡೆದುಕೊಳ್ಳಬೇಕು. ಯಾವುದೇ ಸರ್ಕಾರದ ಮೂಲಭೂತ ಕರ್ತವ್ಯವೂ ಕೂಡ ಇದಾಗಿರುತ್ತದೆ. ಇದನ್ನು ಸರ್ಕಾರ action ಮೂಲಕ ಪ್ರದರ್ಶನ ಮಾಡಬೇಕು. ಕೇವಲ ಮಾತುಗಳ ಮೂಲಕ ಹೇಳದರೆ ಆಗುವುದಿಲ್ಲ. Action ಮೂಲಕ ಪ್ರದರ್ಶನ ಮಾಡಬೇಕು. ನಾನು ಒಂದೇ ಒಂದು ಹೇಳುವುದೇನೆಂದರೆ, ಮುಖ್ಯಮಂತ್ರಿಗಳು ಅದೇ ಜಿಲ್ಲೆಯವರು. ಮುಖ್ಯಮಂತ್ರಿಗಳೆ ಜಿಲ್ಲಾ ಮಂತ್ರಿಗಳು ಕೂಡ ಆಗಿದ್ದಾರೆ. ಅವರಿಗೆ ಏಕೆ ಈ ತರಹ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟರು ಎನ್ನತಕ್ಕಂಥದ್ದೇ ನನ್ನ

ವಿಚಾರ. ಸರಿಯಾದ ರೀತಿಯಲ್ಲಿ ಅವರಿಗೆ ಏಕೆ ಮಾಹಿತಿ ಸಿಗಲಿಲ್ಲ? ಅವರು ಉತ್ತರ ಕೊಟ್ಟು ಹತ್ತಿಪ್ಪತ್ತು ನಿಮಿಷವಾಗಿರಬಹುದು, ಆ ಇಪ್ಪತ್ತು ನಿಮಿಷಕ್ಕೇ ಗೋಲಿಬಾರ್ ಆಗಿದೆಯೆಂದು ಹೇಳಲಾಗಿದೆ. ಗೋಲಿಬಾರ್ ಆಗತಕ್ಕಂಥ ವಾತಾವರಣ ಇದ್ದಕ್ಕಿದ್ದ ಹಾಗೆ ನಿರ್ಮಾಣವಾಗುವುದಿಲ್ಲ. ತತ್‌ಕ್ಷಣ ನಿರ್ಮಾಣವಾಗುವುದಿಲ್ಲ. ಅದು ಆಗಲೇ ಇತ್ತು. I do not know why ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಇವರಿಗೆ ಮಾಹಿತಿ ಕೊಟ್ಟಿಲ್ಲವೋ, ನಿಮಗೆ ಹೇಳಲಿಲ್ಲವೋ ಗೊತ್ತಿಲ್ಲ. District in charge Minister ಗೆ ಹೇಳದೆಯೇ ಡಿ.ಸಿ.ಯವರೇ ಫೈರಿಂಗ್‌ಗೆ ಆರ್ಡರ್ ಮಾಡುವುದಕ್ಕೆ ಆಗುತ್ತದೆಯೆ? ಇವೆಲ್ಲಾ ಇವೆಯೆಲ್ಲಾ, ಇದಕ್ಕೆ ಎಲ್ಲೋ ಒಂದು ಕಡೆ ಅಧಿಕಾರಿಗಳ ನ್ಯೂನತೆಗಳು ಇರುತ್ತವೆ. ಮತ್ತೆ ಕೇಂದ್ರ ಸರ್ಕಾರಕ್ಕೆ ಕೂಡ ಇದು ಗೊತ್ತಾಗಿತ್ತು. ಯಾವಾಗ, ಸುದ್ದಿ ಇಂಟಲಿಜೆನ್ಸ್ ರಿಪೋರ್ಟ್ ಕೂಡ ಅವರಿಗೂ ಕೂಡ ಇತ್ತು. ಬಹುಶ: ಅವರು ರವಾನೆ ಮಾಡಿದ್ದಾರೆ. ಇಷ್ಟೆಲ್ಲಾ ಇದ್ದರೂ ಕೂಡ ನಿಮ್ಮ ಇಂಟಲಿಜೆನ್ಸ್ ಏನು ಮಾಡುತ್ತದೆ? ದಯಮಾಡಿ ಆ ಇಂಟಲಿಜೆನ್ಸ್ ಇದೆಯೆಲ್ಲಾ ಅದಕ್ಕೆ ಪ್ರತ್ಯೇಕವಾಗಿ ರಿಕ್ರುಟ್ ಮಾಡಿ. ಇಂಟಲಿಜೆನ್ಸ್‌ಗೆ, ಈ ಪೈಲಟ್‌ನ್ನು ನೋಡಿಕೊಳ್ಳುವವರಿಗೆ, ಈ ಸೆಕ್ಯುರಿಟಿಯವರಿಗೆ, ಕೆಲಸಕ್ಕೆ ಬಾರದ ಪೊಲೀಸ್‌ನವರನ್ನು ಅಲ್ಲಿಗೆ ಹಾಕಿಬಿಡುತ್ತಾರೆ. ವಯಸ್ಸಾಗಿರುವವರನ್ನು, ಯಾರೋ ಅಬ್ಬೆಪಾರಿಗಳು, ಇನ್‌ಫ್ಲುಯೆನ್ಸ್ ಇಲ್ಲದೇ ಇರುವವರನ್ನು, ಇಂಥವರನ್ನು ಅಲ್ಲಿಗೆ ಹಾಕಿಬಿಡುತ್ತಾರೆ. ಪಾಪ ಅವರು wounded soldiers. ಅವರನ್ನು ತೆಗೆದುಕೊಂಡು ಇಂಟಲಿಜೆನ್ಸ್‌ನಲ್ಲಿ ಇಟ್ಟುಬಿಡುತ್ತಾರೆ. ಅವರು ಯಾವ ರೀತಿ ಇವರಿಗೆ ಇಂಟಲಿಜೆನ್ಸ್ ಮಾಡಿಕೊಡುತ್ತಾರೆ ಹೇಳಿ. ನಾನು ಈ ವಿಚಾರವನ್ನು ಬಹಳ ಸೀರಿಯಾಸ್ ಆಗಿ ಹೇಳುತ್ತಿದ್ದೇನೆ. ಇಂಟಲಿಜೆನ್ಸ್‌ಗೆ ಸೆಪರೇಟ್ ರಿಕ್ರುಟ್ ಮಾಡಬೇಕಾದಂಥ ಅಗತ್ಯತೆ ಇದೆ. ನಾವು ಪದೇ ಪದೇ ಹೇಳುತ್ತಿರುತ್ತೇವೆ. ಇಂಟಲಿಜೆನ್ಸ್ ಫೇಲ್ಯೂರ್ ಯಾವಾಗಲೂ ಇರುತ್ತದೆ. ಈಗಾಗಲೇ ಅವರು ಹೇಳಬೇಕಾಗಿತ್ತು. ಕನ್ನಡಪ್ರಭದಲ್ಲಿ ಬಂದ ತಕ್ಷಣ ಎಲ್ಲ ಕಡೆ ಅವರು ಅಲರ್ಟ್ ಮಾಡಬೇಕಾಗಿತ್ತು, ಫೋರ್ಸ್ ಹಾಕಬೇಕಾಗಿತ್ತು,

ತಕ್ಷಣವೇ ರ್‍ಯಾಪಿಡ್ ಆ್ಯಕ್ಷನ್ ಫೋರ್ಸ್ ಹೋಗಬೇಕಾಗಿತ್ತು. ಈಗ ಇನ್ನೂ ರ್‍ಯಾಪಿಡ್ ಆ್ಯಕ್ಷನ್ ಫೋರ್ಸ್ ಹೋಗುತ್ತಿದೆ. ಮೊದಲೇ ಈ ಬಗ್ಗೆ ನಿಗಾ ತೆಗೆದುಕೊಳ್ಳತಕ್ಕಂಥ ಪ್ರಯತ್ನ ಆಗಬೇಕಾಗಿತ್ತು. ಇದೆಲ್ಲವನ್ನೂ ಮೊದಲೇ ಮಾಡಿದ್ದರೆ ಜನರಲ್ಲಿ ಭಯ ಇರುತ್ತದೆ. ರ್‍ಯಾಪಿಡ್ ಆ್ಯಕ್ಷನ್ ಫೋರ್ಸ್‌ನವರು ಅಲ್ಲಿ ತಿರುಗಾಡುತ್ತಿದ್ದಾರೆ ಎಂದರೆ ಸಾಕು ಜನಗಳಿಗೆ ಭಯ ಬರುತ್ತದೆ. ಜನರು ಈಚೆಗೆ ಬರುವುದಿಲ್ಲ. ಬೆಂಕಿ ಹಾಕುವುದಕ್ಕೆ ಹೋಗುವುದಿಲ್ಲ. ಸುಡುವುದಕ್ಕೆ ಹೋಗುವುದಿಲ್ಲ. ಕಾನೂನನ್ನು ಕೈಗೆ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಈ ತರಹದ್ದನ್ನು ಸರ್ಕಾರ ಮಾಡಬೇಕು ಎಂಬುದೇ ನನ್ನ ಒತ್ತಾಯ. ಈ ವಿಚಾರದಲ್ಲಿ ಯಾವುದೇ ರಾಜಕೀಯವನ್ನು ನಾವು ಮಾಡುವುದಕ್ಕೆ ಹೋಗುವುದಿಲ್ಲ. ಎಲ್ಲರೂ ಕೂಡ ಶಾಂತಿಯಿಂದ ಇರಬೇಕು ಎಂಬುದೇ ನಮ್ಮ ಅಭಿಪ್ರಾಯ ಕೂಡ ಆಗಿದೆ. ಕರ್ನಾಟಕ ರಾಜ್ಯ ಶಾಂತಿಗೆ ಹೆಸರಾದಂಥ ರಾಜ್ಯವಾಗಿದೆ. ಇಲ್ಲಿ ಹಿಂದುಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಇತರ ಎಲ್ಲ ವರ್ಗದ ಜನರು ಕೂಡ ಒಂದೇ ತಾಯಿಯ ಮಕ್ಕಳಂತೆ ಬದುಕಬೇಕು ಎಂಬುದೇ ನಮ್ಮ ಉದ್ದೇಶ. ಈ ವಿಚಾರದಲ್ಲಿ ಯಾರೂ ಕೂಡ ರಾಜಕಾರಣವನ್ನು ಮಾಡಬಾರದು. ಇದರಿಂದ ಯಾರಿಗೂ ಲಾಭವೂ ಕೂಡ ಆಗುವುದಿಲ್ಲ. ಆದುದರಿಂದ ಜನರಲ್ಲಿ ಮತ್ತೆ ನಾನು ಎಲ್ಲ ಶಾಸಕ ಮಿತ್ರರ ಪರವಾಗಿ ಮನವಿ ಮಾಡುವುದೇನೆಂದರೆ ರಾಜ್ಯದ ಎಲ್ಲ ಜನರೂ ಕೂಡ ಶಾಂತಿಯಿಂದ ಇರಬೇಕು. ಯಾರೂ ಕೂಡ ಪ್ರಚೋದನೆಗೆ ಒಳಗಾಗಬಾರದು. ವದಂತಿಗಳಿಗೆ ಕಿವಿಗೊಡಬಾರದು. ಅಲ್ಲಲ್ಲಿಯೇ ಕ್ಷೇತ್ರದ ಯಜಮಾನರುಗಳು, ಧಾರ್ಮಿಕ ಮುಖಂಡರುಗಳು ಸೇರಿಕೊಂಡು ವಾತಾವರಣವನ್ನು ತಿಳಿಗೊಳಿಸತಕ್ಕಂಥ ಕೆಲಸವನ್ನು ಮಾಡಬೇಕೆಂದು ನಾನು ಎಲ್ಲ ಕರ್ನಾಟಕದ ಜನರಲ್ಲಿ ಮನವಿಯನ್ನು ಮಾಡುತ್ತೇನೆ. ಅಲ್ಲಿ ಇರುವಂತಹ ಈ ಭಾಗದ ಯಜಮಾನರುಗಳು, ಆ ಭಾಗದ ಯಜಮಾನರುಗಳು, ಈ ಧರ್ಮದವರು, ಆ ಧರ್ಮದವರು ಎಲ್ಲಾ ಸೇರಿಕೊಂಡು ಅತ್ಯಂತ ಶಾಂತಿಯುತವಾಗಿ ಈ ವಾತಾವರಣವನ್ನು ತಿಳಿಗೊಳಿಸುವಂತಹ ಕೆಲಸವನ್ನು ಮಾಡಬೇಕೆಂದು ನಾನು ಕರ್ನಾಟಕದ

ಎಲ್ಲಾ ಜನರಲ್ಲಿ ಮನವಿಯನ್ನು ಮಾಡುತ್ತೇನೆ. ಇದು ಮತ್ತೆ ಎಲ್ಲೂ ಕೂಡ ಮರುಕಳಿಸದ ರೀತಿಯಲ್ಲಿ ಬಿಗಿಯಾದಂತಹ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಯಾರ್ಯಾರು ಆಸ್ತಿಪಾಸ್ತಿ ನಷ್ಟಕ್ಕೆ ಒಳಗಾಗಿದ್ದಾರೆ, ಅದು ಹಾಸನ ಇರಬಹುದು, ಶಿವಮೊಗ್ಗ ಇರಬಹುದು, ಈ ಭಾಗದವರು ಇರಬಹುದು, ಆ ಭಾಗದವರು ಇರಬಹುದು, ಹಿಂದುಗಳು ಇರಬಹುದು, ಮುಸಲ್ಮಾನರು ಇರಬಹುದು, ಯಾರ್ಯಾರಿಗೆ ಏಟು ಬಿದ್ದು 23 ರಿಂದ 30 ಜನರಿಗೆ ಗಾಯಗಳಾಗಿವೆ ಎಂದು ಹೇಳುತ್ತಿದ್ದಾರೆ, ಅವರಿಗೂ ಕೂಡ ಪರಿಹಾರವನ್ನು ಸರ್ಕಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ** : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಅಲ್ಪಸಂಖ್ಯಾತರು ಇರಬಹುದು, ಹಿಂದೂಗಳಿರಬಹುದು, ಈ ರಾಜ್ಯ ಶಾಂತಿಯಿಂದ ಇರುವಂತಹ ರಾಜ್ಯ. ನಾವು ವಿರೋಧ ಪಕ್ಷದವರಾಗಲಿ, ಆಡಳಿತ ಪಕ್ಷದವರಾಗಲಿ ಶಾಂತಿಯನ್ನು ಕದಡಬೇಕೆನ್ನುವ ಭಾವನೆ ನಮಗೆ ಯಾರಿಗೂ ಕೂಡ ಇಲ್ಲ. ಆದರೆ ನಿನ್ನೆ ಈ ಘಟನೆ ಆಗಬಾರದಾಗಿತ್ತು, ಆಗಿದೆ. ಇದರ ಹಿಂದೆ ಯಾರ ಕೈವಾಡ ಇದೆಯೋ, ಅದನ್ನು ಇಲ್ಲಿ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿರುವಂತಹ ನಿರಾಪರಾಧಿಗಳ ಲಕ್ಷಾಂತರ ರೂಪಾಯಿ ಆಸ್ತಿಯನ್ನು ಹಾಳು ಮಾಡಿದ್ದಾರೆ. ಅದರ ಬಗ್ಗೆ ಅಲ್ಲಿರುವಂತಹ ಜಿಲ್ಲಾಧಿಕಾರಿಗಳಿಗೆ ಹೇಳಿ ಅಥವಾ ಯಾರಾನ್ನಾದರೂ ಕಳುಹಿಸಿಕೊಟ್ಟು, ಅದು ಗಾಯಾಳುಗಳು ಇರಬಹುದು, ಆಟೋರಿಕ್ಷಾ ಇರಬಹುದು, ಅಂಗಡಿಗಳು ಇರಬಹುದು, ಅಲ್ಪಸಂಖ್ಯಾತರಿಗೆ ಇರಬಹುದು, ಹಿಂದುಗಳು ಇರಬಹುದು, ಕೂಡಲೇ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ ಅದಕ್ಕೆ ನಾವು ಸಹಕಾರ ಕೊಡುತ್ತೇವೆ. ಶಿವಮೊಗ್ಗದಲ್ಲಿ ಸತ್ತಂತಹ ಕುಟುಂಬದವರಿಗೂ ಕೂಡ ಪರಿಹಾರವನ್ನು ಕೊಡಬೇಕಾಗುತ್ತದೆ. ಏಕೆಂದರೆ ಎರಡು ದಿನದಲ್ಲಿ ಪರಿಹಾರವನ್ನು ಕೊಡಿಸದೇ ಹೋದರೆ ಅವರು ಬೀದಿಪಾಲಾಗುತ್ತಾರೆ. ಆದುದರಿಂದ ರಾಜ್ಯದ ಜನತೆಗೆ ರಕ್ಷಣೆ ಕೊಡುವುದಕ್ಕೆ ಮಾನ್ಯ

ಮುಖ್ಯಮಂತ್ರಿಯವರಿಗೆ ಪೂರ್ಣ ಸಹಕಾರವನ್ನು ವಿರೋಧ ಪಕ್ಷದ ಕಡೆಯಿಂದ ನಾವು ಕೊಡುತ್ತೇವೆ. ಆದರೆ ಈ ರೀತಿ ನಡೆಯುವುದಕ್ಕೆ ಅವಕಾಶವಾಗಬಾರದು. ಆದುದರಿಂದ ಪರಿಹಾರ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ಇವತ್ತೇ ಸೂಚನೆ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಗೃಹ ಸಚಿವರನ್ನು ಮನವಿ ಮಾಡುತ್ತೇನೆ.

**ಶ್ರೀ ಎಸ್. ಶಿವಣ್ಣ** : ಮಾನ್ಯ ಅಧ್ಯಕ್ಷರೇ, ನಾನು 1994 ರಿಂದ ಈ ವಿಧಾನಸಭೆಯ ಸದಸ್ಯ. ನನ್ನ ಕ್ಷೇತ್ರದಲ್ಲಿ ಹಿಂದುಗಳಿರಬಹುದು, ಮುಸಲ್ಮಾನರಿರಬಹುದು, ಅವರಿಗೆ ವಿನಂತಿ ಏನು ಮಾಡಿಕೊಂಡಿದ್ದೇವೆಂದರೆ ಹಿಂದೂ ದೇವರು, ಮುಸ್ಲಿಂ ದೇವರು, ಕ್ರಿಶ್ಚಿಯನ್ ದೇವರು ಸಾವಿರಾರು ದೇವರುಗಳು ಎಂದೂ ಜಗಳವಾಡಿಲ್ಲ, ಅಷ್ಟು ಸಂಯಮದಿಂದ ಇದ್ದಾರೆ. ನಾವೇಕೆ ಜಗಳವಾಡಬೇಕು ಎನ್ನುವ ದೃಷ್ಟಿಯಿಂದ ನಾವು ಬದುಕಿದ್ದೇವೆ. ನಿನ್ನೆ ಕೂಡ ನನ್ನ ಕ್ಷೇತ್ರದಲ್ಲಿ ಎಸ್‌ಪಿ ಮತ್ತು ಡಿ.ಸಿ. ಯವರಿಗೆ ಒಳ್ಳೆಯ ರೀತಿಯಲ್ಲಿ ಇರಬೇಕೆಂದು ಹೇಳಿದ್ದೇವೆ. ನಮ್ಮ ಸರ್ಕಾರ ಕೂಡ ಆ ರೀತಿ ನಡೆದುಕೊಳ್ಳುತ್ತಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಅಧ್ಯಕ್ಷರೇ, ಈ intelligence ಅನ್ನು ಬಲಪಡಿಸುವುದಕ್ಕೆ separate recruitment ಬಗ್ಗೆ ನಾವು ಈಗಾಗಲೇ ಚಿಂತನೆ ಮಾಡುತ್ತಿದ್ದೇವೆ, ಬಹಳ ದೂರ ಹೋಗಿದ್ದೇವೆ. ಕೇಂದ್ರದ Home Minister ಜೊತೆಯಲ್ಲಿ ಕೂಡ ನಾವು ನಿರಂತರವಾಗಿ ಸಂಪರ್ಕದಲ್ಲಿದ್ದೇವೆ. ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾವು intelligence ಬಲಪಡಿಸಬೇಕಾಗಿರುವ ದಿಕ್ಕಿನಲ್ಲಿ ಎಲ್ಲಾ ಪ್ರಯತ್ನವನ್ನು ನಡೆಸಿದ್ದೇವೆ. ಇನ್ನು ಪರಿಹಾರ ಕೊಡುವ ವಿಚಾರದಲ್ಲಿ ಮಾತನಾಡಿ ಪರಿಹಾರವನ್ನು ಕೊಡಿಸುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ, ದಯಮಾಡಿ ಸಹಕರಿಸಿ. ಈ ಮನೆಯಲ್ಲಿ ಏನೇ ಹೆಚ್ಚಾಗಿ ಮಾತನಾಡಿದರೂ ಸಹ ಅದು ಅಪಾರ್ಥವಾಗುತ್ತದೆ. ನಾನು ಜನರಲ್ಲಿ ಮತ್ತೆ ವಿನಂತಿ ಮಾಡುತ್ತೇನೆ, ಶಾಂತಿ ಸುವ್ಯವಸ್ಥೆ ಕಾಪಾಡಿಕೊಳ್ಳಿ. ಕಾನೂನನ್ನು ಕೈಗೆ

ತೆಗೆದುಕೊಳ್ಳುವಂತಹ ಯಾವುದೇ ಶಕ್ತಿಗಳಿದ್ದರೂ ಸಹ ಸರಿಯಾದಂತಹ ಪಾಠ ಕಲಿಸುವುದಕ್ಕೆ, ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಇಲಾಖೆಯ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ನಮ್ಮ ಅಧಿಕಾರಿಗಳು 24 ಗಂಟೆಗಳ ಕಾಲ alert ಆಗಿದ್ದಾರೆ. ನಿನ್ನೆ ಪೂರ್ತಿಯಾಗಿ ಆ ದಿಕ್ಕಿನಲ್ಲಿ ಪ್ರಯತ್ನ ನಡೆಸಿದ್ದಾರೆ. ಅದಕ್ಕಾಗಿ ಇಷ್ಟು ಶಾಂತ ರೀತಿಯಲ್ಲಿ ಇವೆಲ್ಲ ಸಮಸ್ಯೆಗಳು ಬಗೆಹರಿದಿವೆ. ನಾನು ದಯವಿಟ್ಟು ನಿಮ್ಮ ಸಹಕಾರವನ್ನು ಮತ್ತೊಮ್ಮೆ ಕೋರುತ್ತೇನೆ.

**ಅಧ್ಯಕ್ಷರು:** ಈಗ ಮಾನ್ಯ ಗೃಹ ಸಚಿವರು ಒಂದು ಹೇಳಿಕೆಯನ್ನು ನೀಡುತ್ತಾರೆ.

## 2. ಮಂತ್ರಿಗಳ ಹೇಳಿಕೆ:

**ವಿಷಯ: ನಕ್ಸಲ್ ಚಟುವಟಿಕೆಯನ್ನು ನಿಯಂತ್ರಿಸುವ ಬಗ್ಗೆ.**

**ಶ್ರೀ ವಿ.ಎಸ್. ಆಚಾರ್ಯ** (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಇದು ನಿನ್ನೆ ಸಂಜೆ ನಡೆದಂತಹ ಬೇರೊಂದು ಘಟನೆ ಎಂದರೆ ನಕ್ಸಲ್‌ಗೆ ಸಂಬಂಧಪಟ್ಟ ಬಗ್ಗೆ ಹೇಳಿಕೆಯನ್ನು ನೀಡುತ್ತೇನೆ.

ಕಳೆದ ಸುಮಾರು ಒಂದೂವರೆ ವರ್ಷದ ಅವಧಿಯಲ್ಲಿ ಸರ್ಕಾರದ ವಿಶೇಷ ಪ್ರಯತ್ನದಿಂದ ಈ ನಕ್ಸಲ್ ಚಟುವಟಿಕೆಯನ್ನು ಸಾಕಷ್ಟು ನಿಯಂತ್ರಣಕ್ಕೆ ತರುವಲ್ಲಿ ನಮ್ಮ ಸರ್ಕಾರ ಸಫಲವಾಗಿದೆ. ಆ ಕಾರಣದಿಂದ ಇವತ್ತು ಭಾರತ ಸರ್ಕಾರದವರು ನಕ್ಸಲ್ ಪೀಡಿತ ರಾಜ್ಯಗಳ ಲಿಸ್ಟ್‌ನಿಂದ ಕರ್ನಾಟಕವನ್ನು ಹೊರಗೆ ಇಟ್ಟಂತಹ ವಿಷಯ ತಮಗೆ ಗೊತ್ತಿರಬಹುದು. ಆದರೂ ಇದರ ಬಗ್ಗೆ ನಮ್ಮ ಜಾಗ್ರತೆ ಮುಂದುವರೆಯುತ್ತಿದೆ. ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕೆಲವು ಭಾಗದಲ್ಲಿ ಪೊಲೀಸ್ ನಕ್ಸಲ್ ನಿಗ್ರಹ ಪಡೆ ಕಾರ್ಯಾಚರಣೆ ಇನ್ನು ನಡೆಯುತ್ತಿದ್ದೂ, ಕೆಲವು ಶಸ್ತ್ರಧಾರಿ ನಕ್ಸಲರು ಉಡುಪಿ ಜಿಲ್ಲೆಯ ಅಜಕಾರ್ ಪೊಲೀಸ್ ಠಾಣೆಯ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಸಂಚರಿಸುತ್ತಿರುವ ಬಗ್ಗೆ ಪೊಲೀಸರಿಗೆ ನಿನ್ನೆ ಅಂದರೆ ದಿನಾಂಕ: 01.03.2010ರಂದು ಸಿಕ್ಕ ಖಚಿತ ಮಾಹಿತಿ ಮೇರೆಗೆ ಶ್ರೀ ಪ್ರವೀಣ್ ಮಧುಕರ್ ಪವಾರ್, ಎಸ್‌ಪಿ, ಉಡುಪಿ